ಶ್ರೀವಾದಿರಾಜಗುರ್ವಂತರ್ಗತ ಆಶ್ವಿನೀಹಯಗ್ರೀವಾತ್ಮಕ ಮಧ್ವೇಶಾಯನಮಃ ॥

ಸ್ವಾಪ್ನವೃಂದಾವನಾಖ್ಯಾನ ಪಂಡಿತರಿಂದಲೂ ಪಾರಾಯಣಾರ್ಹ ಕೈಪಿಡಿಯ ಭಾಗದಿಂದ ಆಯ್ದ ಆಖ್ಯಾನ ಸಾರಾಂಶ ಮುಂದುವರೆದುದು ॥

## ಹನ್ನೊಂದನೆಯ ಅಧ್ಯಾಯ ಸಾರಾಂಶ

ಹನ್ನೊಂದನೆಯ ಅಧ್ಯಾಯದಲ್ಲಿ 99 ಶ್ಲೋಕ ಮತ್ತು 15 ಪ್ರಕರಣಗಳಿವೆ. ಆರಂಭದಲ್ಲಿ ಲಕ್ಷ್ಮೀಪತಿಗೆ ಹೇಳುತ್ತಾರೆ—

ಈ ಗ್ರಂಥದಲ್ಲಿ ಅಪ್ರಾಮಾಣ್ಯಶಂಕಾಕಾರಣಗಳೇ ಇಲ್ಲ. ಈ ಕೃತಿ ಅಲೌಕಿಕ. ಅಶರೀರ ರಚಿತ. ಋಜುಪ್ರಣೀತ. ಇಷ್ಟರಮೇಲೆ ಆಖ್ಯಾನ ಸ್ವಾಪ್ನಕೃತಿ, ವಾಸನಾತ್ಮಕ ಶಬ್ದಗಳಿಂದ ಬೋಧನೆ, ಸ್ವಪ್ನದ ಧನ, ವಸ್ತ್ರಮುಂತಾದವು ಎದ್ದಮೇಲೆ ಕಾಣಿಸುವುದೇ ಇಲ್ಲ. ಏಕೆಂದರೆ, ಅವು ಸೂಕ್ಷ್ಮಸಂಸ್ಕಾರದವು. ಆದರೂ ಸ್ವಾಪ್ನಶಬ್ದಗಳು ಬ್ರಾಹ್ಮಣ, ದೇವತಾ, ವೃಷಭ, ರಾಜಾದಿಗಳಿಂದ ಹೇಳಲ್ಪಟ್ಟರೆ ಪ್ರಮಾಣವಾಗುತ್ತವೆ. ಇತರ ಧ್ವನಿಗಳೂ ಸತ್ಯವಾದವು ಮತ್ತು ಸೂಚಕವಾದವು. ಆದರೆ ಸ್ವಾಪ್ನ ಗಜ, ತುರಗ, ರಥ, ರಸ್ತೆ ಜನ ಇತ್ಯಾದಿಗಳಲ್ಲಾ ಸತ್ಯವಾದರೂ ಸೂಕ್ಷ್ಮ (ಸಿನೆಮಾ ಚಿತ್ರಗಳಂತೆ ಸೂಕ್ಷ್ಮವಾದವು). ಜಾಗ್ರತ್ಕಾಲೀನ ವಸ್ತುಗಳಂತೆ ಪರಿಮಾಣ ಯುಕ್ತವಲ್ಲ. ಅರಮನೆ, ಆನೆ ಕಂಡೆ ಎಂದು ತಿಳಿಯುವುದು ಭ್ರಾಂತಿ. ತಾತ ಸ್ವಪ್ನದಲ್ಲಿ ಬಂದಿದ್ದರು ಎಂದು ತಿಳಿಯುವುದೂ ಭ್ರಾಂತಿ. ಆನೆ, ತಾತ ಮುಂತಾದ ಯಾರೂ ಇನ್ನೊಬ್ಬರ ಸ್ವಪ್ನಕ್ಕೆ ಬರಲಾರರು. ಅವರನ್ನು ನೋಡಿದ ಅಥವಾ ಕೇಳಿದ ಸಂಸ್ಕಾರದಿಂದ ಮಾನಸ ಚಿತ್ರಗಳಾಗಿ ಸ್ವಪ್ನ ಆಗುತ್ತೆ. ಹೀಗೆ ಹೇಳಿ ''ನನಗೆ ವಿಪ್ರನ ಜನ್ಮಾಂತರ ಸಂಸ್ಕಾರ ಗೊತ್ತು. ಅವುಗಳನ್ನು ಯೋಗ್ಯರೀತಿಯಲ್ಲಿ ಉದ್ಬೋಧನೆಮಾಡಿ ತತ್ವಬೋಧಿಸುತ್ತೇನೆ. ಇದನ್ನು ತಿಳಿದು ವ್ಯಾಖ್ಯಾನಮಾಡುವ ಲಕ್ಷ್ಮೀಪತಿ ಕೀರ್ತಿಗಳಿಸುತ್ತಾನೆ. ಹೆಂಗಸರೂ ಈ ಕೃತಿ ಬರೆದು ಅಥವಾ ಬರೆಯಿಸಿ ಗಂಡಸರಿಗೆ ಕೊಡಬಹುದು. ವೃಂದಾವನದ ಸುತ್ತಲೂ ಮಾರ್ಜನಮಾಡಿ ಅಲಂಕಾರಮಾಡಬಹುದು. ಆರ್ತಿಮಾಡಿಕೊಡೋಣ. ಚಿತ್ರ-ಬರೆಯೋಣ, ನಾಮಸಂಕೀರ್ತನೆ ಹಾಡೋಣ ಮುಂತಾದ ನಿರುಪಾಧಿಕ ಸೇವೆಗಳನ್ನು ಮಾಡಬಹುದು. ನನ್ನ ಭಕ್ತರು ಮೂರುಜನ. ನಾಗಶಯನ, ಹನುಮಂತ, ವಿಠಲ. ವಿಪ್ರನೇ ! ಸ್ವಾದಿಯಲ್ಲಿ ಶತ್ರು ಬಂದಿದ್ದಾನೆ. ನೀನು ಬೇರೆಕಡೆ ಪ್ರಯಾಣಮಾಡು. ನಾನು ಸರ್ಪಭೂಷಣನಾಗಿ, ಆ ಆಭಿಚಾರಿಕ ಪಾಪಿಯನ್ನು ನಿಗ್ರಹಿಸುತ್ತೇನೆ ಎಂದಿದ್ದಾರೆ. ಆಖ್ಯಾನ ವ್ಯಾಸ, ಸೀತಾಪತಿ, ಶೇಷರಿಗೆ ಇನ್ನೂ ಕಳಿಸಿಲ್ಲ. ಅರು ಶ್ರವಣಮಾಡಿ ಸಂತೋಷ ಹೊಂದುವವರಿಗೂ ವಿಪ್ರನ ನೈವೇದ್ಯ ನನಗೆ ಬೇಡ ಎಂದು ಹೇಳಿದ್ದಾರೆ. ಅನಂತರ

ರಾಮನಿಗೆ ನಮಸ್ಕರಿಸಿ ಒಗಟು ಶ್ಲೋಕ ಹೇಳಿದ್ದಾರೆ. ಆ ಮೂರುಪದ್ಯವನ್ನು ಶೇಷ ತನ್ನ ರಾಜನಿಗೆ ಹೇಳಿ, ಆ ರಾಜನಿಗೆ ಶಾಂತಸ್ಥಿತಿಗೆ ಬಂದಮೇಲೆ, ಅವನನ್ನು ಸೋದೆಗೆ ಕರೆತಂದು ಸೇವೆಮಾಡಿಸಬೇಕೆಂದು ಭಾವ. (ಅರಸನೇ ! ನಿನ್ನ ಪಾಳಯಗಾರರು ವಿರೋಧಿಗಳು. ನಿರಶನ ವ್ರತದ ಗುರುವನ್ನು ಆಶ್ರಯಿಸಿ. ಸಾಮಂತರಲ್ಲಿ ತುಂಬ ದುರ್ಜನನನ್ನು ಶಿಕ್ಷಿಸು. ಇತರರು ಓಡಿಹೋದಮೇಲೆ ಸೋದೆಗೆ ಬಂದು ಸೇವೆ ಮಾಡಿಸು. ದರಿದ್ರಸ್ಥಿತಿಗೆ ನಿನ್ನ ಶತ್ರುಗಳು ಬಂದು ನಿನ್ನ ಬಾಧಕಮಾಡದಂತೆ ಅನುಗ್ರಹಿಸುತ್ತೇನೆ.) ಶೇಷನಿಗೆ ಕೃತಿ ಖ್ಯಾಪನೆಗೆ ಅಪ್ಪಣೆ ಕೊಟ್ಟಿದ್ದಾರೆ. ಪಾರಾಯಣಮಾಡದ ಮಠೀಯರಿಗೆ ದಂಡವನ್ನಾದರೂ ಮಾಡಲಿ. ಪಠನ ಮಾಡ-ದವರು ನನ್ನ ದ್ರೋಹಿಗಳು ಎಂದಿದ್ದಾರೆ. ''ವಿಪ್ರ ! ಸೀತಾಪತಿಬಳಿಗೆ ನೀನಾದರೂ ಹೋಗಿ ಕೃತಿಯನ್ನು ಬೋಧಿಸು. ವ್ಯಾಸ ಶೇಷರೂ ತಿಳಿಯಲಿ. ಶೇಷಾದ್ರಿಯೂ ಪಾರಾಯಣಮಾಡಲಿ'' ಎಂದು ಜ್ಞಾಪಿಸಿ, ಸೀತಾಪತಿಗೆ ಸೂಕ್ಷ್ಮ ಹಿತೋಕ್ತಿ ಹೇಳಿದ್ದಾರೆ. ''ಸೀತಾಪತಿ ವಿಪ್ರನನ್ನು ಬಿಟ್ಟು ಹೋಗಬೇಡ. ಅಲ್ಪವಿಷಯ ಮನಸ್ಸಿಗೆ ಹಚ್ಚಿಕೊಂಡು ಕೊರಗಬೇಡ. ಮಠ ಸರಿಯಾಗಿ ನೋಡಿಕೋ. ಆಖ್ಯಾನ ಪಾರಾಯಣ ಮಾಡದವರಿಗೆ ಅನ್ನ ಹಾಕಬೇಡ. ಏನೂ ಸಂಬಳವಿಲ್ಲದೇ ಬ್ರಾಹ್ಮಣ ಉಪದೇಶಮಾಡಿದರೂ ಅವನಲ್ಲಿ ಅವಿಶ್ವಾಸ ಮಾಡಿದರೆ ನನ್ನ ದ್ರೋಹಿಗಳಾಗುತ್ತಾರೆ.'' ''ವಿಪ್ರನೇ! ಹಿರಿಯಣ್ಣ ಸೀತಾಪತಿಯನ್ನು ಉದಾಸೀನ ಮಾಡಬೇಡ.''

ಹೇ ವಿಪ್ರಗುರುವೇ ! ವಿಠಲನನ್ನು ಕ್ಷಮಿಸಿ ಆಧಿಪತ್ಯದ ಬೀಗದಕೈಯನ್ನು ಅವನಿಗೆ ಕೊಡು. ಅವನು ದುರುಪಯೋಗಮಾಡಿಕೊಳ್ಳದಂತೆ ನೋಡಿಕೊಳ್ಳುತ್ತೇನೆ. ಆತ ನಿನಗೆ ಅಪರಾಧಮಾಡಿದ್ದಕ್ಕೆ ಈಗ ಪಶ್ಚಾತ್ತಾಪ ಹೊಂದಿದ್ದಾನೆ.'' ''ಹೇ ದುಷ್ಟಜನರೇ ! ನನ್ನ ವಾಕ್ಯಗಳು ಪ್ರಮಾಣಸಂಸಿದ್ಧವಾದವು. ಅಪ್ರಾಮಾಣ್ಯ ಕಾರಣಗಳೊಂದೂ ಇಲ್ಲ. ಸರ್ವವೂ ಉಪಾದೇಯ. ಆವಿಷ್ಟನಾಗಿ ವಿಪ್ರನಬಾಯಿಂದ ಹೇಳಿಸಿ ಬರೆಯಿಸಿದ್ದೇನೆ. ನಿರ್ಮೂಲಶಂಕೆ ಅಥವಾ ಉದಾಸೀನತೆ ಮಾಡುವವರು ಅಶುಭವನ್ನು ಹೊಂದಿಯೇ ಹೊಂದುತ್ತಾರೆ. ನನ್ನ ತಪಃಫಲವನ್ನು ನೋಡಿ ನಂಬಿ ಪಠಿಸುವವರಿಗೆ ಶುಭವು ಆಗಿಯೇ ಆಗುತ್ತೆ. ಆಖ್ಯಾನಕ್ಕೆ ಆಧ್ಯಾತ್ಮಾರ್ಥವಿದೆ. ಈಶ್ವರಪರವಾದ ಅರ್ಥವಿದೆ. ಇದಕ್ಕೂ ಕಲಶವಿಟ್ಟಂತೆ ಯುಕ್ತಿಮಲ್ಲಿಕೆ ಇದೆ.''

''ಹೇ ಬ್ರಾಹ್ಮಣ ! ಅಪ್ಪಣ್ಣ ಕೃಷ್ಣಭಟ್ಟನನ್ನು ದೂರಮಾಡು. ಅವನ ಬಲೆಗೆ ಬೀಳಬೇಡ. ವಿಠಲನಿಗೇ ಅವನು ದ್ರೋಹಮಾಡುತ್ತಾನೆ. ಮುಂದೆ ಅವನು ನನ್ನ ಭಕ್ತನಾಗಿ ಆಖ್ಯಾನ ಪಾರಾಯಣರತನಾದರೆ ಸುಖಿಯಾಗಲಿ. ಈಗ ಅವನ

ಸಹವಾಸಬೇಡ. ಈಗ ನೀನು ಸ್ವಲ್ಪ ಕಷ್ಟ ಸಹಿಸು. ತಿನ್ನಲಿಕ್ಕೆ ಸಾಲದು. ಹೊದೆಯುವ ವಸ್ತ್ರಕೂಡ ನಿನಗೆ ಕೊಟ್ಟಿಲ್ಲ. ಶ್ರೀಶಪ್ರಸಾದದಿಂದ ಎಲ್ಲಾ ಒದಗುತ್ತೆ ನೋಡು. ಕಂಬ ಹಿಡಿದು ನಿಲ್ಲಿಸಿದ್ದೇನೆ. ಗುರುಗಳು ಕೆಳಗಾದರಲ್ಲಾ ಎನ್ನಬೇಡ. ಎಲ್ಲಾ ದೇವತೆಗಳೂ ಹೀಗೇ''. ''ವೇದನಿಧಿ ! ನಿನ್ನ ಅದೃಷ್ಟೋಲ್ಲೇಖ ಹನ್ನೊಂದನೆಯ ಅಧ್ಯಾಯದ ಉತ್ತರ-ಭಾಗದಲ್ಲಿ ನೋಡು. ಅಗ್ನಿಹೋತ್ರಿಗಳ ಕಾಲದಲ್ಲಿ ಉದ್ಭವ ಕಾಣುತ್ತೆ. ನಿನ್ನ ವೃದ್ಧಿತಾರೆ ಗಗನ ಗುರಿಯನ್ನು ನಿರ್ವಿಘ್ನವಾಗಿ ಮುಟ್ಟುತ್ತೆ. ವೇದವೇದ್ಯರ ವಂಶವಾಳಿಯ ಚಂದ್ರನಂತೆ ಉದಯ ಹೊಂದುತ್ತೀ. ಮತ್ತಷ್ಟ ದಿವ್ಯಸರಸೀ ಎಂದರೆ ನನ್ನ ಮಠವೆಂಬ ಸರೋವರದ ಕಮಲ ಎಂದು ಸೂಚಿಸಿದ್ದಾರೆ. ಈಗಲಂತೂ ರಥೋತ್ಸವದ ವಿಘ್ನಗಳನ್ನೂ ತಳ್ಳಿಬಿಟ್ಟಿದ್ದೇನಷ್ಟೇ ! ಮುಂದೂ ನಿನಗೆ ನಿರ್ವಿಘ್ನ ಅಭ್ಯುದಯ ಕಾದಿದೆ. ನಿನ್ನನ್ನೂ ವೇದವೇದ್ಯರನ್ನೂ ನೋಡಿದರೆ ನನಗೆ ಪ್ರಮೋದ.'' ಎಂದು ಅವರ ಭವಿಷ್ಯಹೇಳಿ, ಧೈರ್ಯತುಂಬಿ ಮಂಗಳ ಹಾಡಿದ್ದಾರೆ.

ಶ್ರೀವಾದಿರಾಜಗುರ್ವಂತರ್ಗತ ಮಧ್ವೇಶಾರ್ಪಣಮಸ್ತು.

## ಹನ್ನೆರಡನೆಯ ಅಧ್ಯಾಯ

ಹನ್ನೆರಡನೆಯ ಅಧ್ಯಾಯದಲ್ಲಿ 111 ಶ್ಲೋಕ, 17 ಪ್ರಕರಣ. ಇನ್ನು ಕೊನೆಯವರಿಗೂ ನಿದರ್ಶನ ಪರ್ವ. ಮೊದಲನೇ ನಾಂದಿ ಸೇರಿ 12 ಅಧ್ಯಾಯ ನಿದರ್ಶನಪರ್ವ. ಆಖ್ಯಾನ ಪ್ರಾಮಾಣ್ಯಕ್ಕೆ ನಿದರ್ಶನಗಳಿವೆ. ವಾದಿರಾಜರನ್ನು ಸೇವಿಸಿ ಉದ್ಧೃತರಾದವರ ನಿದರ್ಶನಗಳಿವೆ. ಕಥೆ ಕಮ್ಮಿ, ಧರ್ಮಬೋಧೆ ಹೆಚ್ಚು, ಅಧ್ಯಾತ್ಮಾರ್ಥ ಗಹನವಾಗಿ ತುಂಬಿದೆ. ಅಧಿಕಾರಿಗಳಿಗೆಲ್ಲಾ ಸಂಬಂಧಪಟ್ಟ ವಿಷಯಗಳಿವೆ. ಸ್ವಪ್ನಾದಿ ಮೂಲಕ ತನ್ನ ಸಂಬಂಧಿಶ್ಲೋಕಗಳನ್ನು ತಿಳಿದುಕೊಂಡು ಅಧಿಕಾರಿ ವೃಂದಾವನಸೇವೆ ಮಾಡಬೇಕು.

ಮೊದಲು ಬ್ರಾಹ್ಮಣನಿಗೆ ಹೇಳುತ್ತಾರೆ. ''ನಿನಗೆ ಪಲ್ಲಕ್ಕಿ ಉತ್ಸವ ಮಾಡಿಸುತ್ತೇನೆ. ಅದು ಸತ್ಯವಾದಮೇಲೆ, ಇತರ ವಿಷಯಗಳೂ ಹಾಗೆಯೇ ಎಂದು ತಿಳಿದು 'ಅನ್ನಕ್ಕೇನು ಗತಿ? ಪರ್ಯಾಯಕ್ಕೇನು ಗತಿ?' ಎಂಬ ಚಿಂತೆ ಬಿಟ್ಟು ಸುಖವಾಗಿರು. ನಿನ್ನ ಹೆಸರನ್ನು ವೃಂದಾವನಾಚಾರ್ಯ ಎಂದು ಕರೆಯದೇ ನಾಮನಿರ್ದೇಶಮಾಡಿ ನಿನ್ನನ್ನು ಕರೆಯುವವನು ನನ್ನ ದ್ರೋಹಿ. ಅವನು ಹೆಣಕ್ಕೆ ಸಮಾನ.''

''ಲಕ್ಷ್ಮೀಪತೇ ! ನೀನು ಆಖ್ಯಾನಪ್ರಚಾರಮಾಡು. ಇಷ್ಟಾ ಫಲವನ್ನೂ ಹೊಂದು. ಯುಕ್ತಿಮಲ್ಲಿಕೆಯೂ ನಿನಗೆ ಬುದ್ಧಿವಶವಾಗಿದೆ. ಅದರ ಶ್ರವಣದಿಂದ ನಿಃಸಂಗೋಜಾಯತೇ ಅಧಿಕಾರಿ ನಿರಭಿಮಾನಿ ವಿರಕ್ತನಾಗುತ್ತಾನೆ. ಲಕ್ಷ್ಮೀಪತಿ,

ವಿಪ್ರನನ್ನು ಹೊಂದಿಕೊಂಡು ದೇವರನ್ನು ಸೇವಿಸು. ವಿಪ್ರನಲ್ಲಿ ಉಪೇಕ್ಷೆ ಅಪಮೃತ್ಯು ಉಂಟುಮಾಡುತ್ತೆ. ವಿಪ್ರಾಂತರ್ಯಾಮಿಯಾದ ನನ್ನಿಂದ ಆಖ್ಯಾನಮಾಡಲ್ಪಟ್ಟಿದೆ. ಆದ್ದರಿಂದ ಅವನನ್ನು ಹಿಂಸೆಮಾಡಿದವನು ನನ್ನ ಹಿಂಸೆ ಮಾಡಿದಂತೆ ಆಯಿತು. ಅವನಿಗೆ ಅನ್ನ ನೀಡಿದರೆ ನನಗೆ ಭಿಕ್ಷೆ ಮಾಡಿಸಿದಂತೆ ಆಗುತ್ತದೆ. ಅವನ ಋಣತೀರಿಸಿದವನು ದೀರ್ಘಾಯುವಾಗುತ್ತಾನೆ. ಗ್ರಂಥೋಕ್ತಫಲಗಳು ರವಿಗೋಚರವಾದ ಮೇಲೆ ಸಂಶಯಕ್ಕೆ ಕಾರಣವೆಲ್ಲಿ?''. ''ಸೀತಾಪತಿ! ಹರಿಯಲ್ಲಿ ಅಪಾರಭಕ್ತಿಮಾಡು. ಗುರುವಿನಲ್ಲಿ ಭಕ್ತಿ ಭಾರಮಾಡು. ಅಪಾರ ಸಂಸಾರ ದಾಟಲು ಯತ್ನಿಸು !'' ''ವಿಪ್ರನೇ ! ಸ್ವಪ್ನ ಸತ್ಯತ್ವವಿಷಯದಲ್ಲಿ ವಾದಮಾಡಿ ಪರಪಕ್ಷವನ್ನು ಸೋಲಿಸಬೇಕಾದರೆ ಈ ನನ್ನ ಗ್ರಂಥವನ್ನು ತತ್ವವಾದಿಗಳು ಅಂಗೀಕರಿಸಲಿ.'' ''ಶೇಷ ವಿಪ್ರನಿಗೆ ಸತ್ರಕಾಲ ನೋಡಿ ಅನ್ನದಾನ ಮಾಡು, ಮಾಡಿಸು. ಅವನು ಸತ್ಪಾತ್ರ. ಸ್ವಾಮಿ,ಸಖಾ, ಬಂಧು ಸುಹೃತ್ ಎಲ್ಲವೂ ಗುರುರಾಜರೇ ಎಂದು ನಂಬಿರುವ ಅವನಿಗಿಂತ ಬೇರೆ ಸತ್ಪಾತ್ರ ಯಾರಿದ್ದಾರೆ ಹೇಳು. ಅವನು ಶರಣಾಗತ. ನಾನು ಬಿಡುವುದಿಲ್ಲ, ನೀನು ನನ್ನ ಸೇವಕನಾದ್ದರಿಂದ ಪೂಜಿಸು. ಒಳ್ಳೆ ವಸ್ತ್ರಕೊಡು.'' ''ವಿಪ್ರನೇ! ಕಾರ್ಪಣ್ಯಬೇಡ, ಯಥೇಷ್ಟ ಕೊಡು. ಈಶ್ವರಕೊಟ್ಟಿದ್ದು ಸಾಕು ಎನ್ನು. ಕೊನೆಯಲ್ಲಿ ಸುತ್ರಾಮ ಲೋಕ ನಿನಗೆ ಕಾದಿದೆ. ವೇದವೇದ್ಯರ ಭಜನೆಯಲ್ಲಿರು.'' ''ಹೇ ಸೀತಾಪತಿ ! ವಿಪ್ರನನ್ನು ಬಿಡುವುದೇಕೆ ? ಬಿಟ್ಟು ಹುಚ್ಚರ ಸೇವೆ ಮಾಡಬೇಡ. ದೇಹವನ್ನು ಬಿಡಬೇಡ.'' ''ಲಕ್ಷ್ಮೀಪತಿ! ಪ್ರಕೃತಿಪ್ರತ್ಯಯಾದಿ ದೇವತೆಗಳು ನನ್ನ ಆಳುಗಳು. ಆದ್ದರಿಂದ ಆಖ್ಯಾನದಲ್ಲಿ ಶಬ್ದ-ದೋಷಗಳಿಲ್ಲ, ಪ್ರತೀತಾರ್ಥಬಾಧಿತವಾಗಿದ್ದರೆ ಅಂತರ್ಯಾಮಿ ಪರ ಅರ್ಥಮಾಡು. ಸೀತಾಪತಿ ಸಂಶಯ ಕಳೆದು ಅವನಿಗೆ ಉತ್ಸಾಹ ಹುಟ್ಟಿಸು.'' ''64'' ''ಹೇ ವಿಪ್ರ! ವಾದಿರಾಜಭಟ್ಟರಿಗೆ ನನ್ನ ಮಹಿಮೆ ಹೇಳು. ನಿನಗೆ ಲಜ್ಜೆಯಾದರೆ ಲಕ್ಷ್ಮೀಪತಿಗೆ ಹೇಳುತ್ತೇನೆ. ಲಕ್ಷ್ಮೀಪತಿ ಬೋಧಿಸಿದಾಗ ನೀನು ಸುಮ್ಮನಿರು. ನನ್ನ ತೇಜಸ್ಸಿನಿಂದ ಸರ್ವಲೋಕಗಳೂ ಜಿತವಾಗಿವೆ. ದೇವತೆಗಳೆಲ್ಲರೂ ನನ್ನನ್ನು ನಮಸ್ಕರಿಸುತ್ತಾರೆ. ಇಂತಹ ನನ್ನನ್ನು ಧ್ಯಾನಮಾಡು.'' ''ಲಕ್ಷ್ಮೀಪತಿ ! ವಿಪ್ರನ ಸನ್ಮಾನದಿಂದ ಪುಣ್ಯಗಳಿಸಿ ಹಯಗ್ರೀವನನ್ನು ಧ್ಯಾನಿಸು. ಸೀತಾಪತಿಗೂ ಆಖ್ಯಾನವನ್ನು ಹೇಳು.'' ''ವಿಪ್ರನೇ ! ಬರೆಯಿಸುವಾಗ ತಪ್ಪು ಮಾಡಬೇಡ. ಅಚ್ಯುತನನ್ನು ಧ್ಯಾನಿಸು. ನನ್ನಲ್ಲಿ ಮನಸ್ಸಿಟ್ಟು ಹೇಳಿದರೆ ತಪ್ಪಾಗುವುದಿಲ್ಲ, ಈ ವೃಂದಾವನಾಖ್ಯಾನವನ್ನು ಸದ್ವೃಂದಕ್ಕೆಲ್ಲಾ ಹೇಳಿಬಿಡು. ನಾನೇ ಹೇಳೋಣವೆಂದರೆ, ಸಭಿಕರು ನನ್ನ ತೇಜಸ್ಸನ್ನು ತಡೆಯಲಾರರು. ವಿಪ್ರ ಪ್ರತ್ಯಕ್ಷವೇ ನಂಬಿದ ಭಕ್ತರಿಗೆ ಪ್ರಮಾಣ. ನಾನು ದೇವಲೋಕಗಳಲ್ಲಿ ಸಂಚರಿಸುತ್ತಾ

ಸಕಾಲದಲ್ಲಿ ಇಳಿದು ಬಂದು ವಿಪ್ರನಿಗೆ ಸ್ವಪ್ನದಲ್ಲಿ 3,5,7 ಶ್ಲೋಕ ಹಾಡಿ ಹೇಳಿ ಹೊರಟುಹೋಗುತ್ತೇನೆ. ಆತನು ಧಾರಣಮಾಡುತ್ತಾನೆ.'' ''ಲಕ್ಷ್ಮೀಪತಿ ! ಹೀಗೆ ವಿಪ್ರನನ್ನು ಪುಣ್ಯದಿಂದ ತುಂಬುತ್ತೇನೆ. ನನ್ನ ಮಹಿಮೆಯನ್ನು ವಿಪರೀತ ತಿಳಿದರೆ ನರಕವಾಗುತ್ತೆ, ಯಥಾರ್ಥವಾಗಿ ತಿಳಿದರೆ ಮೋಕ್ಷಕ್ಕೇ ಸಾಧನ. ನನ್ನ ಅನುಗ್ರಹದಿಂದ ನೀನು ಕೃಷ್ಣಭಕ್ತಿ ಮಾಡು. ನಿನ್ನ ಪಾಪ ಬಗ್ಗಿಹೋಯಿತು. ನೀನು ಕವಚಧಾರಿ ಆಗಿಬಿಟ್ಟೆ ಪಾಪ ನಿನ್ನ ಒಳಕ್ಕೆ ಹೋಗಲಾರದು.'' ''ವಿಪ್ರನೇ ! ನನ್ನಲ್ಲಿ ಭಕ್ತಿಮಾಡಿ ನೀನು ವಿಸ್ತಾರ ಕೀರ್ತಿಸಂಪಾದಿಸುತ್ತಿ. ನಿನ್ನ ರಾಜಕಾರ್ಯ ಸಾಕು. ನನ್ನ ಧ್ಯಾನಮಾಡು. ಈಶ್ವರನ ಸಂಕಲ್ಪವಿದ್ದಂತೆ ಆ ರಾಜಕಾರ್ಯ ನಡಯುತ್ತೆ, ನೀನು ಹೆಚ್ಚಾಗಿ ಕೈ ಹಾಕಬೇಡ, ರಾಜರು ಪ್ರಾಯಿಕವಾಗಿ ಪಾಪಿಗಳೇ, ನಿನ್ನಲ್ಲೂ ನನ್ನಲ್ಲೂ ಶರಣಾಗತರಲ್ಲ. ನೀನು ಭಕ್ತಿಯಿಂದ ಕೇಳು. ನನ್ನ ಅಂತರ್ಯಾಮಿ ವಿಷ್ಣು ಗುಣಗಳ ವೈಭವವನ್ನು ವರ್ಣಿಸುತ್ತೇನೆ. ಆದರೂ ಹೆಚ್ಚು ಸೂಕ್ಷ್ಮಗಳನ್ನು ಹೇಳುವುದಿಲ್ಲ, ಇದು ಕಲಿಗಾಲ, ಜನರು ಅವಿಶ್ವಾಸಿಗಳು. ನೀನು ಪ್ರಚಾರ ಮಾಡಿದರೆ ಕೇಳುವ ಯೋಗ್ಯತೆ ಅವರಿಗಿಲ್ಲ, ಎದುರಿಗಿದ್ದುದ್ದನ್ನು ಇಲ್ಲವೆನ್ನುತ್ತಾರೆ. ಶಾಪಕೊಟ್ಟು ಸುಟ್ಟುಬಿಡಬೇಕೆನಿಸುತ್ತೆ, ಆದ್ದರಿಂದ ನೀಚ ಸೇವಾರತರಾದ ಜನರಿಗೋಸ್ಕರ ಹೇಳಬಾರದುದನ್ನು ಹೇಳುವುದೇ ಇಲ್ಲ, ಸೂಕ್ಷ್ಮವೃತ್ತಾಂತ ಬಿಟ್ಟು ಬಿಟ್ಟು ''**ವಕ್ತವ್ಯಮೇವ ವಕ್ಷ್ಯಾಮಿ**'' ಅಧಿಕಾರಿಗಳ ಹಿತಕ್ಕಾಗಿ ಯೋಗ್ಯವಾದಷ್ಟು ಮಾತ್ರ ಹೇಳುತ್ತೇನೆ.'' ಹೀಗೆ ವಿಪ್ರ, ಸೀತಾಪತಿ, ಲಕ್ಷ್ಮೀಪತಿ, ಶೇಷರಿಗೆ (ಮುಂದೆ ಆಗುವ) ಹಿತೋಕ್ತಿ ನಿದರ್ಶನಗಳಿವೆ.

ಶ್ರೀವಾದಿರಾಜಗುರ್ವಂತರ್ಗತಮಧ್ವೇಶಾರ್ಪಣಮಸ್ತು

## ತ್ರಯೋದಶಾಧ್ಯಾಯ ಸಾರಾಂಶ

ತ್ರಯೋದಶಾಧ್ಯಾಯದಲ್ಲಿ 101 ಶ್ಲೋಕಗಳು ಹನ್ನೊಂದು ಪ್ರಕರಣಗಳು ಇವೆ.

ಈ ಅಧ್ಯಾಯದಲ್ಲಿ ವಾದಿರಾಜಭಟ್ಟರನ್ನು ಹಿತೋಕ್ತಿಯಿಂದ ವಶಮಾಡಿಕೊಂಡು ವಿಪ್ರನ ಪೋಷಕ ಜ್ಯೇಷ್ಠರನ್ನಾಗಿ ಮಾಡಿದ್ದಾರೆಂದಿದೆ. ಅನೇಕ ಉತ್ತಮಾಧಿಕಾರಿಗಳಿಗೆ ಯೋಗ್ಯಸಾಧನೆ ತಿಳಿಸುವುದರಿಂದ ಪಾತ್ರಸಾಮ್ಯ ನೋಡಿಕೊಂಡು ಅಧ್ಯಾತ್ಮಾರ್ಥ ರೀತಿಯಿಂದ ವಾಚಕರೂ ತಮ್ಮ ತಮ್ಮ ಸಾಧನೆ ತಿಳಿಯುತ್ತಾರೆ. ಈ ಕಾರಣದಿಂದ ಈ ಆಖ್ಯಾನದ ನವ್ಯತೆ ಮಹತ್ವಗಳು ಆರಿಹೋಗುವ ಹಾಗೆ ಇಲ್ಲವೇ ಇಲ್ಲ. ಪ್ರಕೃತ ವಾದಿರಾಜಭಟ್ಟರಿಗೆ ಮೂರು ವಿಷಯ ಬೋಧಿಸುತ್ತಾರೆ. ''ಆಖ್ಯಾನವನ್ನು ಪಠಿಸು. ವೃದ್ಧ (ವಿಪ್ರ)ನನ್ನು ಭಜಿಸು; ಕುಮತಿ ಸಂಗ ಬಿಟ್ಟು ಸುಮತಿ ಸಂಗ ಹಿಡಿ''. ಹೀಗೆ ಮಾಡಿದರೆ ದೀರ್ಘ ಆಯುಸ್ಸು, ಇಲ್ಲದಿದ್ದರೆ ನರಕ. ನೀವು ಹೇಳಿದ ಮಾತ್ರಕ್ಕೆ ನರಕವೇ

ಎನ್ನುವ ಹಾಗಿಲ್ಲ. ಶ್ಲೋಕ 16(ಅರ್ಥ— ಪರಲೋಕಸಾಧನೆ ಬೋಧಿಸುವ ಅಧಿಕಾರವುಳ್ಳ ನನಗೆ ವಿಪ್ರನನ್ನು ಪ್ರವಚನಕಾರ್ಯಕ್ಕೆ ಉಪಯೋಗಿಸಿಕೊಂಡಾಗಲೇ ಪ್ರಭುತ್ವವೇ ಹರಿವಾಯುಗಳಿಂದ ಕೊಡಲ್ಪಟ್ಟಿದೆ. ಆದ್ದರಿಂದ ನನ್ನ ಆಜ್ಞೆಯಿಂದ ಸಾಧನ ನಿರ್ಣಯ. ಆ ನನ್ನ ಶಕ್ತಿ ವಿಪ್ರನಿಗೂ ಇದೆ) ಎಂದಿದ್ದಾರೆ. ಆದ್ದರಿಂದ ಅವರನ್ನು ಬಿಟ್ಟು ಆಖ್ಯಾನಬಿಟ್ಟು ಸಾಧನೆ ಸಾಧ್ಯವಿಲ್ಲ. ವಾದಿರಾಜರಿಗೆ ಭೇದಜ್ಞಾನ ಸಂಪಾದಿಸು ಎಂದಿದ್ದಾರೆ. ''ನಾನು ಜ್ಞಾನಿಪ್ರಿಯ'' ಎಂದು ಎರಡಾವರ್ತಿ ಹೇಳಿದ್ದಾರೆ. ''ಈ ಉಪದೇಶ ಧಾರಣೆಯಿಂದ ಶ್ವಾಸ ಎಳೆತವಿದ್ದರೂ ಬದುಕಿ ಅಭೀಷ್ಟಹೊಂದುತ್ತಾನೆ. ಆದ್ದರಿಂದ ಆಖ್ಯಾನ ಹೇಳಿಸಿಕೋ. ಜ್ಞಾನಿಯಾಗು. ಭಕ್ತನಾಗು'' ಎಂದಿದ್ದಾರೆ. ''ವಿಪ್ರನೇ! ಸಂಸಾರಚಿಂತೆ ಮನಸ್ಸಿಗೆ ಹಚ್ಚಿಕೊಳ್ಳಬೇಡ. ಆಖ್ಯಾನ ಜಪಿಸಿದರೆ ಅಂಭ್ರಣೀದೇವಿ ನಿನ್ನನ್ನು ಪೋಷಿಸುತ್ತಾಳೆ. ಅಷ್ಟಾಧ್ಯಾಯಪಾರಾಯಣದಿಂದ ಅಸಾಧ್ಯವಾದ ಅಭೀಷ್ಟ-ವಿಲ್ಲ.'' ''ಎಲೈ ವಿಷ್ಣು ಭಕ್ತರಾದ ಪಂಡಿತ ಸೀತಾಪತ್ಯಾದಿಗಳಿರಾ ! ಈ ನನ್ನ ಕೃತಿಯು ತತ್ವವಾದವೆಂಬ ಮಧ್ವಶಾಸ್ತ್ರಕ್ಕೇ ಸೇರಿದ್ದೆಂದು ಅಂಗೀಕರಿಸಿ'' ''32'' ''ವಿಪ್ರನೇ ಈ ದಿವ್ಯ ಆಖ್ಯಾನಕ್ಕೆ ನೀನೇ ಪ್ರವಚನಕರ್ತಾ. ನನ್ನ ಅಪೂರ್ವಗುಣಪ್ರವ್ಯಕ್ತತ್ವ, ನನ್ನ ಕೃಪಾ ಪಾತ್ರತ್ವವೆಂಬ ಎರಡು ನಿಮಿತ್ತಗಳಿಂದ ನೀನೇ ಆಚಾರ್ಯನು, ಶೇಷನಿಗೂ ಹೇಳು. ದಿವ್ಯ ಆಖ್ಯಾನ ಉಪೇಕ್ಷೆಮಾಡಿದರೆ, ಇಂದ್ರಲೋಕಕ್ಕೆ ಹೋಗಿ ಬಿಡುತ್ತೆ. ಸರಿಯಾಗಿ ಬರೆಯಿಸು.'' ''ಹೇ ಲಕ್ಷ್ಮೀಪತೇ ! ಈ ಬ್ರಾಹ್ಮಣ ಅನ್ನಕ್ಕೇನು ಗತಿ ಎಂದು ಚಿಂತಿಸುತ್ತಾನೆ. ಲೋಕವಾರ್ತಾ ಶ್ರವಣಮಾಡುತ್ತಾನೆ. ಆದ್ದರಿಂದ ಮಧ್ಯೇ ಮಧ್ಯೇ ತಪ್ಪು ಬರೆಯಿಸುತ್ತಾನೆ. ಆದ್ದರಿಂದ ನಾನು ಸೂಕ್ಷ್ಮವೃತ್ತಾಂತ ಬರೆಸಿಲ್ಲ. ಇದನ್ನೂ ನಾನಾ ರಾಗಗಳಿಂದ ಬರೆಯಿಸಿದ್ದೇನೆ. ಅನೇಕ ಶಾಸ್ತ್ರ ಉಪದೇಶಮಾಡಿಲ್ಲ. ಗ್ರಂಥಗೌರವ ಆಗಬಾರದು. ದೇವತೆಗಳು ಪರೋಕ್ಷಪ್ರಿಯರು. ಸ್ವರಾದಿ ದೇವಭಾಷಾಪದಗಳು ಬಹ್ವರ್ಥಕವು. ಇವನ್ನೆಲ್ಲಾ ವಿಚಾರಮಾಡಿ ವೈಷ್ಣವಸಾಧನೆಗೆ ಹೇಳಿದಷ್ಟು ಸಾಕಾಗಿದೆ ಎಂದೂ ತಿಳಿದು, ಹೆಚ್ಚುಹೇಳಿ ನೀಚರ ಸೇವೆಮಾಡುವ ಅಯೋಗ್ಯರಿಗೆ ವಜ್ರದಂತಹ ಮಹಾಪ್ರಮೇಯಗಳನ್ನು ಏತಕ್ಕೆ ಚೆಲ್ಲಬೇಕೆಂದು ವಿಮರ್ಶೆಯಿಂದ ದೇವರು ತಾನಾಗಿಯೇ ಪ್ರೇರಿಸಿ ಮಾಡಿಸಿದ್ದು ಸಾಕೆಂದು ನಿಲ್ಲಿಸಿದ್ದೇನೆ. ಈ ಗ್ರಂಥರತ್ನವನ್ನು ಉಪೇಕ್ಷಿಸಿದವನಿಗೆ ದಾನವರಿಗಾಗುವ ಗತಿ ಆಗುತ್ತೆ.'' ''ಲಕ್ಷ್ಮೀಪತೇ! ಸೀತಾಪತ್ಯಾದಿ-ಗಳಿಗೆ ಹೋಗಿ ಹೇಳಿಬಿಡು. ಅವರು ಆದರ ಪೂರ್ಣರು. ನನ್ನ ಆಜ್ಞಾನೆರವೇರಿದರೆ ನಿನ್ನ ರಕ್ಷಣೆ ನಾನು ನೋಡಿ ನೀವು ಮಾಡುವ ಪ್ರೀತಿ ಸಾಧನಸೇವೆ. ಲಕ್ಷ್ಮೀ ನಿಮ್ಮ ಮನೆಗೆ ಒಲಿದು ಬಂದು ಇರಲಿ. ನಿಮ್ಮ ಭಜನೆ ಕೇಳಿದರೆ ಜನರಿಗೆ ವೈರಾಗ್ಯ ಭಕ್ತಿ ಬರುತ್ತೆ.''

''ವಿಪ್ರನೇ ! ಘೋರ ಕಾಲ, ನೀನೇ ಅನ್ನಯತ್ನಮಾಡು. ಯೋಗ್ಯರು ನಿನ್ನನ್ನು ಸತ್ಕರಿಸುವುದಿಲ್ಲ. ನೀನು ನನ್ನ ಧ್ಯಾನದಲ್ಲಿ ಮಗ್ನನಾಗಿರು.(ಅದೇ ಯತ್ನ). ನಾನು ನಿನ್ನ ಸಂತತ ಪಾಲಕ.'' ''ಹೇ ವಾದಿರಾಜಭಟ್ಟ ! ವಿಪ್ರನಿಗೆ ಆಶ್ರಯ ನೀಡು. ಲೋಭ-ಮಾಡಬೇಡ. ಇತರರಿಂದ ಕೊಡಿಸಿದರೆ ಸಾಲದು. ನೀನೇ ಕೊಡು. ಆಯುರ್ವೃದ್ಧಿ-ಯಾಗುತ್ತೆ. ಸಾತ್ವಿಕಬುದ್ಧಿಹೊಂದಿ ಕೃತಿಯನ್ನು ಪಠಿಸು. ಜನರಿಗೆ ಮಾರ್ಗದರ್ಶಿ ಆಗು. ನನಗೆ ತುಂಬ ಪ್ರಿಯವಾಗುತ್ತೆ. ವಿಪ್ರನಲ್ಲಿದ್ದು ನಾನೇ ಭೋಜನ ಮಾಡುತ್ತೇನೆ.'' ''ಹೇ ಸೀತಾಪತಿ ! ವಿಪ್ರಕರ್ಣಮಣಿಯನ್ನು ಆ ಅಂಗಡಿಯಲ್ಲಿಟ್ಟಿದ್ದಾನೆ. ಒಂದನ್ನಾದರೂ ಬಿಡಿಸಿಕೊಂಡು ಬಂದು ಬಲಗಿವಿಯಲ್ಲಿಡು. ಬರೀ ಕಿವಿಯಲ್ಲಿದ್ದರೆ ಉಪದೇಶವಿಲ್ಲ.'' ''ಹೇ ವಿಪ್ರ ! ಬೇಗ ಧರಿಸು. ಗುರ್ವಾಜ್ಞೆಯನ್ನು ಮೀರಬೇಡ.'' ಎಂದಿದ್ದಾರೆ. ಈ ಆಜ್ಞೆಗಳೆಲ್ಲಾ ಅವರುಗಳ ಅನೇಕ ಜನ್ಮಗಳ ಮಧ್ಯದಲ್ಲಿ ಯಾವುದೋ ಜನ್ಮದ ಅವಸ್ಥಾ-ವಿಶೇಷದಲ್ಲಿ ಸಾಧನೆಮಾಡಿಸುತ್ತವೆ. ಯಾವ ಜನ್ಮಕ್ಕೂ ಅನ್ವಯಿಸದೆ ಇದ್ದರೆ ಅಂತರ್ಯಾಮಿ ಪರ ಅರ್ಥ ತಿಳಿಯಬೇಕು. ವಾಕ್ಯಕ್ಕೆ ಅಪ್ರಾಮಾಣ್ಯ ಇಲ್ಲ. ವೈಯರ್ಥ್ಯ-ವಿಲ್ಲ.

ಶ್ರೀವಾದಿರಾಜಗುರ್ವಂತರ್ಗತ ಶ್ರೀಮಧ್ವೇಶಾರ್ಪಣಮಸ್ತು

## ಹದಿನಾಲ್ಕನೆ ಅಧ್ಯಾಯದ ಸಾರಾಂಶ.

ಚತುರ್ದಶಾಧ್ಯಾಯದಲ್ಲಿ 98 ಶ್ಲೋಕಗಳು 6 ಪ್ರಕರಣಗಳು.

ಮೊದಲು ಸೀತಾಪತಿಗೆ ನಿದರ್ಶನ ಹೇಳಿದ್ದಾರೆ. ''ನೀನು ಸುವರ್ಣ ಕರ್ಣಾಭರಣ ಬಿಡಿಸಿಕೊಂಡು ಬಂದು ವಿಪ್ರನ ಬಲಗಿವಿಗೆ ಇಟ್ಟಿದ್ದೀ. ಆದ್ದರಿಂದ ಕೃತಿ ಉಪದೇಶಕ್ಕೆ ಅನುಕೂಲವಾಯಿತು. ಪುಣ್ಯಾತ್ಮ ಅವನಿಗೆ ನನಗೆ ಸಹ ಸೇವೆ ಆಯಿತು'' ಎಂದು ಹೇಳಿದ್ದಾರೆ. ನಂತರ ಶೇಷನಿಗೆ ಆಜ್ಞೆಮಾಡಿದ್ದಾರೆ. ''ವಿಪ್ರನ ದಾರಿದ್ರ್ಯವನ್ನು ನಾಶಮಾಡಿ ನನ್ನ ಭಕ್ತ ಸತ್ಕಾರದ ಪುಣ್ಯ ಹೊಂದು. ಅವನಿಗೆ ಸೇವೆ ಮಾಡಿದರೆ ನನಗೇ ಮಾಡಿದಂತೆ ಆಗುತ್ತದೆ.'' ನಂತರ ವಿಠಲನಿಗೆ ಹೇಳುತ್ತಾರೆ. ''ಕಪಟವಿಲ್ಲದೇ ವಿಪ್ರನನ್ನು ಪಾಲಿಸು. ಪೂರ್ವಕಷ್ಟ ಸ್ಮರಿಸು.'' ''ಲಕ್ಷ್ಮೀಪತೇ ! ಪೂರ್ತಿ ಆಖ್ಯಾನವನ್ನು ಸೇವಿಸು. ವಿಪ್ರ ನಿಷ್ಕಪಟಿ. ಅವನ ಸ್ತ್ರೀಮುಖ ನನ್ನನ್ನು ಆಕರ್ಷಿಸುವುದಿಲ್ಲ. ನಾನು ನಿಃಸಂಗ. ಅಧ್ಯಾಯಕ್ಕೆ ನೂರು ಶ್ಲೋಕಮಾಡಿ ಎಂದು ಹೇಳಿದ್ದು ಆಗಿದೆ. ನೋಡು. ನಾನು ಸತ್ಯಸಂಕಲ್ಪ. ಬ್ರಾಹ್ಮಣನಿಗೆ ಇಲ್ಲಿ ಸ್ವಲ್ಪ ಕಷ್ಟವಾದರೂ ಸತ್ತು ವಿಮಾನವನ್ನೇರಿ ನನ್ನ ಬಳಿಗೇ ಬರುತ್ತಾನೆ.'' ''ವಿಪ್ರನೇ! ಜನ ಈ ಕೃತಿ ವಂಚನೆ ಎಂದು ಬೈದರೂ ಸುಮ್ಮನಿರು. ಆಖ್ಯಾನ ಪಠಿಸು. ನಿನ್ನ ಪರಮಗುರು ಇದೇನೆಂದು ಕೇಳಿದರೆ, ತೋರಿಸು. ಆತ ನೋಡಿ

ಸಂತೋಷದಿಂದ ಹೇಳಿದ ಹಿತೋಕ್ತಿ ಧರಿಸು. ಅವನ ಕೊಠಡಿ ಬಾಗಿಲು ಕಾಯಿ. ಅಲ್ಲೇ ಮಲಗು. ದೂರ ಹೋಗಿ ಮನಸ್ಸು ಕೆಡುವ ಸ್ಥಳಗಳಲ್ಲಿ ಮಲಗಬೇಡ. ಈ ಬುದ್ಧಿ ಚಾತುರ್ಯ ನಿನ್ನನ್ನು ಉದ್ಧರಿಸುತ್ತೆ. ಒಬ್ಬ ಕಾಮೀ ಉದರಪರಾಯಣ ಇದ್ದಾನೆ. ಆ ಭ್ರಷ್ಟ ನಿನ್ನಲ್ಲಿಗೆ ಬಂದು ಏನೇನೋ ಹೇಳಿಕೊಡುತ್ತಾನೆ. ಅವನ ಮಾತನ್ನು ನೀನು ಕೇಳಬೇಡ. ಅಪ್ಪಣ್ಣ ಕೃಷ್ಣಭಟ್ಟನನ್ನೂ ಹಾಗೇ ದೂರ ಇರಿಸು. ಇವರು ಕೃತಿ ವಿಪ್ರಕಲ್ಪಿತ ಎಂದು ಕಲ್ಪಿಸುತ್ತಾರೆ. ಯಮಲೋಕದಲ್ಲಿ ಗರಗಸದಿಂದ ಕುಯ್ಯಿಸಿಕೊಳ್ಳುತ್ತಾರೆ. ಅವರು ವಿಪ್ರನನ್ನು ''ವೃಂದಾವನಾಚಾರ್ಯ''ರೆಂದು ಕರೆಯುವುದೇ ಇಲ್ಲ. ಇಂತಹ ಪಾಪಿಗಳನ್ನು ನರಕಕ್ಕೆ ಎಳೆಯಿಸುತ್ತೇನೆ. ನೀನು ಬನ್ನಿ ಹೋಗಿ ಎಂದುಮಾತ್ರ ಭಾಷಿಸು. ಹೆಚ್ಚಿಗೆ ಬೇಡ. ನಿನಗೆ ಅಯೋಗ್ಯಶ್ರವಣ ಆಗದಂತೆ ರಕ್ಷಿಸುತ್ತೇನೆ. ನಿನ್ನಿಂದ ಅಯೋಗ್ಯ-ರಿಗೆ ಉಪದೇಶ ಆಗದಂತೆ ನೋಡಿಕೊಳ್ಳುತ್ತೇನೆ. ಹೀಗೆ ಬೋಧಿಸಿ ಮುಂದೆ ವಿಪ್ರ-ಪ್ರಕರಣದಲ್ಲಿ ವಿಠಲನ ವಿಚಾರ ಹೇಳುತ್ತಾರೆ. ''ವಿಠಲ ಎಂದರೆ ಜ್ಞಾನಶೂನ್ಯರನ್ನು ರಕ್ಷಿಸುವವನು ಎಂದರ್ಥ. ವಿಠಲ ಹೆಸರಿಗೆ ತಕ್ಕಂತೆ ಅಯೋಗ್ಯರನ್ನು ಪೋಷಿಸುತ್ತಾನೆ.'' ನಾನು ಋಜು, ನಿರ್ದೋಷ ಎಂದು ತಿಳಿಯಬೇಕೆಂದು ತಮ್ಮ ಸ್ವಭಾವವರ್ಣನೆ ಹತ್ತು ಶ್ಲೋಕದಿಂದ ಮಾಡಿದ್ದಾರೆ. ನನಗೆ ದ್ವೇಷಾದಿಗಳಿಲ್ಲ. ಶಾಪಕೊಟ್ಟು ಪುಣ್ಯಹಾನಿಮಾಡಿ-ಕೊಳ್ಳುವುದಿಲ್ಲ. ಭಕ್ತರನ್ನು ಕೈಬಿಡುವುದಿಲ್ಲ. ಅವರು ಹೃದಿಸ್ಥ ಹರಿಧ್ಯಾನದಿಂದ ಸುಖ-ವಾಗಿರಲಿ ಎಂದು ಹೇಳಿ, ವಿಠಲನ ದೋಷ ವ್ಯಕ್ತಮಾಡುತ್ತಾರೆ. ''ನಾನು ಬೇಡಿದವರ ಇಷ್ಟಾರ್ಥ ದಾತಾ'' ಎನಿಸಿಕೊಳ್ಳಬೇಕೆಂದು ವಿಟ್ಠಲ ಕೆಟ್ಟ ಪ್ರತಿಜ್ಞೆಮಾಡಿದ್ದಾನೆ. ಇದರಿಂದ ದುರ್ಜನರಿಗೆ ವಶನಾಗಿದ್ದಾನೆ. ವಿಠಲ ಪೂಜೆಮಾಡಿ ಹೊರಗೆ ಬಂದರೆ ಸರಿ, ಆ ದುರ್ಜನರು ಕಾದಿದ್ದು ಬೇಕಾದ್ದನ್ನು ಕೇಳಿ ಒಯ್ಯುತ್ತಾರೆ. ಅಯೋಗ್ಯ ದಾನದಿಂದ ವಿಠಲನಿಗೆ ಪಾಪ ಬರುತ್ತೆ. ''ವಿಠಲ! ಆ ಪ್ರತಿಜ್ಞೆ ಬಿಟ್ಟುಬಿಡು. ಪಾತ್ರಾಪಾತ್ರ ನೋಡಿ ದಾನಮಾಡು'' ಎನ್ನುತ್ತಾರೆ. ''ನನಗೂ ಸ್ವಪ್ನ ಏಕಾಗಬಾರದು ? ವಿಪ್ರನು ನನಗೇ ಎಲ್ಲವನ್ನೂ ಏತಕ್ಕೆ ಹೇಳಬಾರದು?'' ಎಂದು ಮುಂತಾಗಿ ಲಕ್ಷ್ಮೀಪತಿ ಚಿಂತಿಸುತ್ತಾನೆ. ''ಹಾಗೆಲ್ಲಾ ಚಿಂತಿಸಬಾರದು. ಸ್ವಪ್ನ ವಿಪ್ರನಿಗೇ ಮೀಸಲು. ಈ (ಏಡಮೂಕ) ಜನ್ಮದಲ್ಲೇ ಅಂಥ ಶ್ರವಣ. ಆಗಲೂ ಸ್ವಪ್ನದಲ್ಲಿ ಸಾವಿರಾರು ಶ್ಲೋಕಗಳು ಹೇಳಿದ್ದರೂ ಬೆಳಿಗ್ಗೆ ಹೇಳುವಾಗ ಬಾಯಿಂದ ಎರಡು ಮೂರೇ ಶ್ಲೋಕಗಳು ವ್ಯಕ್ತವಾಗುತ್ತವೆ. ಉಳಿದದ್ದನ್ನು ಅಪಹರಿಸಿ ಬಿಡುತ್ತೇನೆ. ಕೇಳುವ ಜನರ ಯೋಗ್ಯತೆ ಅಲ್ಪತೆ ನೋಡಿಕೊಂಡು ಹಾಗೆ ಮಾಡಿದ್ದೇನೆ''. ''ಹೇ ವಿಠಲ! ನೀನು ಭಕ್ತಿಯಿಂದ ಸಾಧನೆಮಾಡು. ನಿನಗೆ ಬ್ರಹ್ಮಲೋಕ ಕಾದಿದೆ. ಬ್ರಾಹ್ಮಣನಿಗೆ ಏನಾದರೂ ಸಹಾಯ ಮಾಡು. ಸುಮ್ಮನಿದ್ದರೆ ಮರೆಯುತ್ತಿ

ಎಂದು ಪುನಃ ಪುನಃ ಆಜ್ಞಾಪಿಸಿದ್ದೇನೆ. ನನ್ನ ಆಶ್ರಿತ ವಿಪ್ರನು ನಿನ್ನ ಉಪಕಾರದಿಂದಲೂ ಋಣಹೀನನಾಗಿ ಬಾಳಲಿ. ನೀನು ನನ್ನನ್ನು ಶರಣು ಹೊಂದಿ ಸುಖವಾಗಿ ಬಾಳು.'' ''ಲಕ್ಷ್ಮೀಪತೇ! ಈ ದುರವಸ್ಥೆಯ ಕಾಲ ನೋಡು. ಕೃತಿ ಎಲ್ಲಾ ಕೃತ್ರಿಮವೇ ಎಂಬ ಜನರೂ ಇದ್ದಾರಲ್ಲ ? ವಿಪ್ರನೇ ಮಾಡಿದ್ದೆಂದು ಅನಾದರ ಮಾಡುತ್ತಾರೆ. ನಾನು ಏತಕ್ಕೆ ವ್ಯಸನ ಪಡಲಿ? ಸುವಿಶಾರದ ಹಯಗ್ರೀವಸ್ವಾಮಿ ನಿನ್ನ ಕರುಣಾಪೂರ್ಣ ರಸವರ್ಷಿ-ದೃಷ್ಟಿಯನ್ನು ನಮ್ಮ ಮೇಲೆ ಸುರಿಸು. ಭಕ್ತವಶ್ಯನೆಂಬ ಬಿರುದನ್ನು ಬಿಡಬೇಡ. ವಿಪ್ರನ ಕಾರ್ಯವನ್ನು ಸಫಲಗೊಳಿಸು. ಭಕ್ತರನ್ನು ಆಖ್ಯಾನ ನಿಮಿತ್ತದಿಂದ ಉದ್ಧಾರಮಾಡ-ಬೇಕೆಂಬ ನನ್ನ ಸಂಕಲ್ಪವನ್ನು ಪೂರ್ತಿಮಾಡು. ನನ್ನ ಮಾತುಗಳನ್ನು ಸತ್ಯಮಾಡು ಎಂದು ಅಚ್ಛಿನ್ನಭಕ್ತಿಸಂಛನ್ನನಾಗಿ ಅವನನ್ನು **ನೋಡಿ ನೋಡಿ** ಪ್ರಾರ್ಥಿಸುತ್ತೇನೆ.'' ಎಂದಿದೆ. ಒಂದೇ ಪಾತ್ರಕ್ಕೆ ಎರಡುಮೂರುಸಲ ಉಪದೇಶವಾದರೆ ಮೊದಲು ಸಲ ಬೈಗಳ ಇರುತ್ತೆ, ಎರಡನೇ ಸಲ ಸೌಮ್ಯಮಾತಿರುತ್ತೆ, ಮೂರನೇ ಸಲ ಪ್ರಶಂಸೆಯೇ ಇರುತ್ತೆ. ವಾದಿರಾಜರ ಸೇವೆಯಿಂದ ಆಖ್ಯಾನ ಪಾರಾಯಣದಿಂದ ಅಂಥ ಪ್ರಗತಿ ಕಾಲಕಾಲಕ್ಕೆ ಬರುತ್ತೆಂದು ಸೂಚನೆ.

ಶ್ರೀವಾದಿರಾಜಗುರ್ವಂತರ್ಗತಮಧ್ವೇಶಾರ್ಪಣಮಸ್ತು.

## ಪಂಚದಶಾಧ್ಯಾಯದ ಸಾರಾಂಶ

ಪಂಚದಶಾಧ್ಯಾಯದಲ್ಲಿ 112 ಶ್ಲೋಕ 12 ಪ್ರಕರಣ.

ಮೊದಲು ವಿಪ್ರನಿಗೆ ಹೇಳುತ್ತಾರೆ. ''ವಿಪ್ರನೇ ! ಸಾಲವಿದ್ದರೂ ಗುರುಗಳನ್ನು ಶರಣುಹೊಂದಿ ಅವರ ಕಾರುಣ್ಯದಿಂದ ಸಂಸಾರಜಯಿಸು. ವೇದವೇದ್ಯರನ್ನು ಭಜಿಸು. ನನ್ನಲ್ಲಿ ಅಚಂಚಲ ಭಕ್ತಿಮಾಡು. ನಿನ್ನನ್ನು ನಾನು ಬಿಡುವುದಿಲ್ಲ.'' ಶ್ಲೋಕ ನಾಲ್ಕರಲ್ಲಿ, ಮಧ್ವೇಶಸ್ವಾಮಿ ನನಗೆ ಒಲಿದಿದ್ದಾನೆ. ಆದ್ದರಿಂದ ಎಲ್ಲಾ ಹರಿಭಕ್ತರೂ ನನ್ನನ್ನು ನಿತ್ಯವೂ ಭಜಿಸುತ್ತಾರೆ'' ಎಂದು ಹೇಳಿದ್ದಾರೆ. ''ಆಖ್ಯಾನಶ್ರವಣ, ಪಾರಾಯಣಮಾಡಿ, ಎಲ್ಲಾ ದುಃಖವೂ ಪಾಂಡವರಿಗೆ ಹೋದಂತೆ ಹೋಗುತ್ತೆ. ಯೋಗ್ಯರಿಗೆ ಉಪದೇಶ ಮಾಡಿದರೆ ಸರ್ವಾಭೀಷ್ಟವೂ ಆಗುತ್ತೆ. ಉಪಕಾರಕ್ಕೆ ಪ್ರತ್ಯುಪಕಾರ ಗುರುವಿಗೆ ಏನಾದರೂ ಮಾಡು. ಮೂರು ರೀತಿ ಜನರಿದ್ದಾರೆ. ಕೆಲವರು ಅಪಕಾರ ಹೊಂದಿದರೂ ಅಪಕಾರ ಮಾಡಿದವರು ಯೋಗ್ಯರಾಗಿದ್ದರೆ ಅವರಿಗೆ ಜ್ಞಾನವನ್ನೇ ಕೊಟ್ಟುಬಿಡುತ್ತಾರೆ. ರಹೂಗಣ ಭರತನಿಗೆ ಪಲ್ಲಕ್ಕಿ ಹೊರೆಸಿದ್ದರೂ ಅವನಿಗೆ ಜ್ಞಾನವನ್ನೇ ಕೊಟ್ಟನು. ಉಪಕಾರಕ್ಕೆ ಪ್ರತ್ಯುಪಕಾರ ಮಾಡುವವರು ರಾಜಸರು. ಪ್ರತ್ಯುಪಕಾರದ ಅಪೇಕ್ಷೆ ಇಲ್ಲದೇ ಸೇವೆ ಮಾಡಿದರೆ ಸಾತ್ವಿಕವೇ. ಉಪಕಾರ ಮಾಡಿಸಿಕೊಂಡ ಬದಲಾಗಿ ಏನೂ ಉಪಕಾರ

ಮಾಡದೇ ಅಪಕಾರವನ್ನೇ ಮಾಡಿದರೆ ಅಂತಹವರು ತಾಮಸರು. ಇದು ಲೋಕನೀತಿ. ನೀನು ತಾಮಸನಲ್ಲ, ನನ್ನ ನಿರೂಪ ಶಾಸನವನ್ನು ತಿಳಿದು ಅಧಿಕಾರಿಗಳಿಗೆ ಹೇಳು. ನೀನೂ ಆಚರಿಸು.'' ''ಸೀತಾಪತೇ ! ನಾನು ಹಿಂದಿನ ರಾಜನನ್ನು ಪ್ರೇರಿಸಿ ವಾಮನದ್ವಾದಶೀದಿನ ಮೂರರಲ್ಲಿ ಮಧ್ಯದ ಗ್ರಾಮವನ್ನು ಬ್ರಾಹ್ಮಣರಿಗೆ ದಾನ ಮಾಡಿಸಿದೆ. ಆದರೆ ರಾಜನ ಕಡೆಯ ಅಧಿಕಾರಿಗಳು ಬ್ರಾಹ್ಮಣರಿಗೆ ಗ್ರಾಮವನ್ನು ಕೊಟ್ಟೇ ಇಲ್ಲ, ಅದರ ಫಲ ಇಲ್ಲಿ ಸಂತತಿನಾಶ, ನಂತರ ಮನುಕಲ್ಪ ನರಕ, ನಂತರ ವಿಷ್ಠಾಕ್ರಿಮಿತ್ವ, ವಿಪ್ರಗ್ರಾಮದಲ್ಲಿ ರಾಜನು ಕಂದಾಯ ವಸೂಲ್ಮಾಡಿದರೆ ರೌರವ ನರಕವಾಗುತ್ತೆ, ರಾಜನು ವೃಂದಾವನ ಸೇವೆ ಮಾಡಿದರೆ, ರಕ್ಷಿಸುತ್ತೇನೆ. ನೀನು ಹೇಳು. ಸೀತಾಪತೇ ! ನನ್ನ ಇಷ್ಟವಾದ ಕಾರ್ಯತ್ರಯವನ್ನು ನಿನ್ನ ಸ್ವಾಮಿಗಳಿಂದ ಮಾಡಿಸಿ ನನ್ನ ಲೋಕಕ್ಕೆ ಬಾ. ಧ್ಯಾನ ಮಾಡು. ನನ್ನ ಪಾದ ನೋಡು. ನನ್ನ ಆಕಾರದಲ್ಲಿ ಹರಿಮೂರ್ತಿ ನೋಡು ಕೊಂಡಾಡು. ನಿನಗೆ ಸಂಸಾರಭಯವಿಲ್ಲ, ಆ ಮೂರನೇ ರಾಜಾ ರಾಮನಾಮಕ ನನ್ನ ಅನುಗ್ರಹದಿಂದ ಶ್ರೀರಾಮನಿಂದ ರಕ್ಷಿತನಾದರೂ ಈಗ ವೃಂದಾವನಾಚಾರ್ಯರ ಒಂದು ಮಾತನ್ನೂ ನಡೆಸುವುದಿಲ್ಲವಲ್ಲಾ ! ಗುರುವಿಗೆ ಸರಿಯಾಗಿ ನಡೆದುಕೋ ಎಂದು ರಾಜನಿಗೆ ತಿಳಿಸು. ಶಿಷ್ಯನ ಹಿತಚಿಂತಕ ಗುರು. ಗುರುದ್ವಾರಾ ಪ್ರಸನ್ನನಾಗಿಯೇ ದೇವರು ವಿದ್ಯಾರ್ಥಿರಕ್ಷಕ. ಹೀಗಿದ್ದರೂ ರಾಜಸೇವಾ ನಿರತನಾಗಿ ನನ್ನ ಮಾತನ್ನು ಕೇಳದೇ ನನ್ನ ಸೇವೆ ಮಾಡದೇ ನರಕಮಾರ್ಗ ಹಿಡಿದಿದ್ದಾನೆ. ನೀನು ಇದೆಲ್ಲಾ ಆ ರಾಮರಾಜನಿಗೆ ತಿಳಿಸು. ವೃಂದಾವನ ಸೇವೆ ಮಾಡಿದರೆ ಆರೋಗ್ಯ. ರಾಜ್ಯಸ್ಥೈರ್ಯ ಎಲ್ಲಾ ಉಂಟಾಗುತ್ತೆಂದು ಹೇಳು ಶೇಷನಿಗೆ ಐದು ಮಕ್ಕಳಾಗುತ್ತೆಂದು ಹಿಂದೆ ಹೇಳಿದ್ದು ಆಗಿಲ್ಲ ಎಂದು ಶಂಕಿಸಬೇಡ. ಪಂಚವೃಂದಾವನವೇ ಪಂಚ ಪುತ್ರರು. ಔರಸ ಪುತ್ರರೇ ಏಕಾಗಿಲ್ಲ ಎಂದರೆ ಹಿಂದಿನ ಜನ್ಮದಲ್ಲಿ ಶೇಷ ಕೂರ್ಮನಾಮಕ ರಾಜ. ಸ್ತ್ರೈಣನಾಗಿ ಸಂಧ್ಯಾಕಾಲದಲ್ಲಿ ನರ್ಮದಾನದಿಯಲ್ಲಿ ಜಲವಿಹಾರ ಮಾಡುತ್ತಿದ್ದ. ಆ ನದೀ ತೀರದಲ್ಲಿದ್ದ ಅಣಿಮಾಂಡವ್ಯರು ಸಿಟ್ಟಾಗಿ ಶಾಪ ಕೊಟ್ಟರು. ಅಣಿಮಾಂಡವ್ಯರಿಗೆ ಯಾರು ನನ್ನ ಮೇಲೆ ಚಾಡಿಹೇಳಿದರು ಎಂದು ಹುಡುಕಿಸಿ ಪತ್ತೆಹಚ್ಚಿ ಆ ವಸುಹೋತ್ರನೆಂಬ ಬ್ರಾಹ್ಮಣನನ್ನು ಹಿಡಿಸಿ ಕಾರಾಗೃಹದಲ್ಲಿಟ್ಟು ಅವನ ಕಣ್ಣನ್ನು ಈ ರಾಜ ಕೀಳಿಸಿದ. ಆ ವಿಪ್ರದ್ರೋಹದಿಂದ ಈಗ ಶೇಷನಿಗೆ ಒಳಕಣ್ಣು ಹಾಗೂ ಹೊರಗಿನ ಒಂದು ಕಣ್ಣೂ ಸಹ ಹೋಯಿತು. ಆದರೂ ಶೇಷನನ್ನು ಉದ್ಧರಿಸುತ್ತೇನೆ. (57) ತನ್ನ ಪುರೋಹಿತನ ಪೂಜೆ ಮಾಡಿದ್ದರಿಂದ ಬ್ರಾಹ್ಮಣನಾಗಿ ಹುಟ್ಟಿದ್ದಾನೆ ಎಂದಿದ್ದಾರೆ. ಹೀಗೆ ಶೇಷನ ಉದ್ಧಾರ ಎಂದು ಸೂಚಿತವಾಗಿದೆ. ಆಗ ಶೇಷ ಆಖ್ಯಾನದಲ್ಲಿ ಆಸಕ್ತನಾಗುತ್ತಾನೆ. ಸೀತಾಪತಿಯೂ

ಜೊತೆಯಾಗುತ್ತಾನೆ. ವೃಂದಾವನಾಚಾರ್ಯ ಯತಿಗಳು ಅತ್ಯುತ್ತಮರೆಂದು ತಿಳಿದು ಅವರ ಪ್ರಖ್ಯಾತಿಯನ್ನು ಹೆಚ್ಚಿಸಿ ತಾನೂ ಉದ್ಧೃತನಾಗುತ್ತಾನೆ. (63) ವಿಪ್ರನಿಗೆ ''ಗುರುಗಳ ಕಾರ್ಯವನ್ನು ಮಾಡಿ ನೀನು ಉದ್ದೇಶಮಾಡಿರುವ ಯಾತ್ರೆ ಮಾಡು'' ಎನ್ನುತ್ತಾರೆ. ''ವೃದ್ಧ ಗುರುವನ್ನು ಚೆನ್ನಾಗಿ ನೋಡಿಕೋ'' ಎಂದು ಸೀತಾಪತಿಗೂ ಹೇಳಿದ್ದಾರೆ. ''ಸೀತಾಪತಿ ! ವಿಪ್ರಾವಮಾನಿಗಳಾದವರ ಮಾತನ್ನು ಕೇಳಬೇಡ. ವೃದ್ಧ ಗುರುವನ್ನೂ ಚೆನ್ನಾಗಿ ನೋಡಿಕೋ''. ಹೀಗೆ ಸೀತಾಪತಿಗೂ ಈ ಅಧ್ಯಾಯದಲ್ಲಿ ನಿದರ್ಶನಗಳಿವೆ. ಈ ಜನ್ಮದಲ್ಲಿ ಶೇಷ ದೀರ್ಘ ಕಷ್ಟಾನುಭವಮಾಡಿದ್ದಕ್ಕೆ ಕಾರಣ ಹೇಳುತ್ತಾರೆ. ''ನಾನು ರಾಜನಿಗೆ ಹೇಳೆಂದು ಪೂರ್ವದಲ್ಲಿ ಹೇಳಿದ್ದೆನಲ್ಲಾ ಶೇಷ ರಾಜನಿಗೆ ಹೇಳಲಿಲ್ಲ. ಆ ರಾಜನೂ ಕೇಳಿದ್ದನ್ನೆಲ್ಲಾ ಮಾಡಲಿಲ್ಲ. ಈ ದ್ರೋಹದಿಂದ ಇಬ್ಬರಿಗೂ ಕಷ್ಟವಾಯಿತು. ಆಖ್ಯಾನ ಪುರಾಣ ಹೇಳುತ್ತಿದ್ದವನಿಗೆ ಏನೂ ಕೊಡದೇ ಎದ್ದು ಹೋದ, ಹಾಗೆಲ್ಲಾ ಮಾಡಬಾರದು.'' ಶ್ಲೋಕ (81) ವಿಪ್ರಪ್ರಕರಣದಲ್ಲಿ ವಿಪ್ರನಿಗೆ ದರಿದ್ರ ಸ್ಥಿತಿ ಬರುತ್ತದೆಂದು ಸೂಚಿಸಿ ''ವೇದವೇದ್ಯರನ್ನು ಶರಣುಹೊಂದು. ಕುಂಡಲಧರಿಸಿ ಊಟ-ಮಾಡುವಾಗ ನಿನ್ನ ಅಂತರ್ಯಾಮಿಯಾದ ನನ್ನನ್ನು ಸ್ಮರಿಸಿಕೊಂಡು ಊಟಮಾಡು,'' ಎಂದು ಹಿತೋಕ್ತಿ ಹೇಳಿದ್ದಾರೆ. ಆದರೆ ಇಲ್ಲೇ ಶ್ಲೋಕ 79ರಲ್ಲಿ ವೃಂದಾವನಾಚಾರ್ಯರು ದೇವರಿಗೆ ಪ್ರದಕ್ಷಿಣೆ ಮಾಡಿದ್ದನ್ನು ವರ್ಣಿಸಿದ್ದಾರೆ. ''ಬ್ರಾಹ್ಮಣ ಬುದ್ಧಿಪೂರ್ವಕವಾಗಿ ನಿಧಾನವಾಗಿ ಹಯಗ್ರೀವ ಸ್ವಾಮಿಗೆ ಪ್ರದಕ್ಷಿಣೆ ಮಾಡಿ ನಮಸ್ಕರಿಸಿದರು. ಆತನ ಮನಸ್ಸೆಲ್ಲಾ ನಮಸ್ಕಾರದಲ್ಲಿತ್ತು. ಆಗ ಕಳ್ಳ ಹಯಗ್ರೀವದೇವರ ಮೈಮೇಲಿನ ಹಾರವನ್ನೇ ಕಳಚಿ ಎತ್ತಿಕೊಂಡು ಹೊರಟು ಹೋದನು. ಹಿತ್ತಲಕಡೆಯಿಂದ ಓಡುತ್ತಿರುವಾಗ ಒಂದು ಮುಳ್ಳಿನ ಪೊದೆಗೆ ಕಾಲು ಸಿಕ್ಕಿಕೊಂಡು ಬಿದ್ದು ಸತ್ತೇಹೋದ. ಹಾಗೇ ವಿಪ್ರನ ಶತ್ರುಗಳನ್ನು ಕೊಂದು ವಿಪ್ರನನ್ನು ರಕ್ಷಿಸಿದ್ದೇನೆ. ಆ ವಿಪ್ರನ ಸಂಬಂಧದಿಂದ ಸೀತಾಪತ್ಯಾದಿಗಳೂ, ಶೇಷಾದ್ರಿ ಸಹ ಉದ್ಧಾರ ಹೊಂದುತ್ತಾರೆ.'' ''ಹೇ ಶೇಷಾದ್ರಿ ! ನಿನ್ನ ಹಿಂದಿನ ಅದ್ವೈತಮಾರ್ಗ ದೂರಮಾಡು, ಪಶ್ಚಾತ್ತಾಪ ಹೊಂದು. ಆಖ್ಯಾನ ಪಾರಾಯಣ ಹಿಡಿ. ಭಸ್ಮ ಅಳಿಸು. ಊರ್ಧ್ವಪುಂಡ್ರ ಹಚ್ಚು. ನಿತ್ಯವೂ ಧವಳಗಂಗೆಯಲ್ಲಿ ಪ್ರಾತಃ ಸ್ನಾನ ಮಾಡು. ಆಖ್ಯಾನ ಪಾರಾಯಣ ಹಿಡಿ. ಏಕಾದಶೀ ಉಪವಾಸ ನಿರತ-ನಾಗು. ದಾಸ್ಯಭಾವದಿಂದ ಶರಣು ಹೊಂದು. ಹೀಗೆ ಮಾಡಿದರೆ ಕಪ್ಪೆ, ನಾಯಿ ಮುಂತಾದ ಕಷ್ಟಜನ್ಮ ತಪ್ಪುತ್ತೆ. ಅಂತಃಶುದ್ಧಿ ಆಗುತ್ತೆ. ಹರಿಜ್ಞಾನ ಬರುತ್ತೆ. ನಂತರ ಹಿಂದಿನ ದುಷ್ಕರ್ಮಗಳನ್ನು ಸುಡಬೇಕು. ಪುನಃ ಅದ್ವೈತ, ವಿಭೂತಿ ತರಬಾರದು. ಹಾಗೆ ಪುನಃ ಅದ್ವೈತ ಹಿಡಿದರೆ ಭೂಮಿಗೇ ಭಾರವಾಗುತ್ತೀ'' ಎಂದಿದ್ದಾರೆ. ಹೀಗೆ ವಿಪ್ರನ ಬಳಗದ

ಉದ್ಧಾರ. ''ವಿಪ್ರನೇ ! ಬರೆಯಿಸುವಾಗ ತಪ್ಪನ್ನು ಬರೆಯಿಸಬೇಡ.'' ''ನಾಹಂತಂ ಸಂಭರಾಮಿ'' ಎಂದು ಸರಿಯಾಗಿ ಬರೆಯಿಸು, ನನ್ನನ್ನೇ ಭಜಿಸು. ದುಷ್ಟನ್ನು ಭಜಿಸಬೇಡ. ದುಶ್ಚಿತ್ತ ದೂರಮಾಡಿ ಮಚ್ಚಿತ್ತನಾಗು. ಕಾಂಚನದ ಆಸೆಬಿಟ್ಟು ಸ್ವತಂತ್ರ ಚಿನ್ಮಾತ್ರನಾದ ನಾರಾಯಣನ ಆಸೆಮಾಡು.'' ''ಹೇ ರಾಮಚಂದ್ರ ! ಗುಣಸಾಂದ್ರ, ರಘುಪೇಂದ್ರ, ಬ್ರಹ್ಮಾದಿವಂದ್ಯಸ್ವಾಮಿ, ನೀನು ದಯೆಯಿಂದ ನನ್ನ ಪ್ರಾರ್ಥನೆಯಿಂದ ರಾಮರಾಜನಿಗೆ ರಾಜ್ಯಕೊಟ್ಟೆ, ಈಗ ನೀನು ಕೊಟ್ಟ ರಾಜ್ಯವನ್ನು ಪಾಲಿಸೆಂದು ಬೇಡುತ್ತೇನೆ. ಅವನ ರಾಜ್ಯವನ್ನು ಇತರರ ಪಾಲು ಮಾಡಬೇಡ. ಅವನಿಂದಲೇ ಪುನಃ ಪುನಃ ಸಂಸೇವಿತನಾಗಿ ಅವನನ್ನು ಉದ್ಧರಿಸು. ಹೀಗೆ ವೃಂದಾವನಸ್ಥ ರಾಘವೇಂದ್ರನನ್ನು ನಾನು ಪ್ರಾರ್ಥಿಸಿ ಮೊರೆ ಹೊಕ್ಕಿದ್ದೇನೆ. ಮಾನವನ ಸಂಪತ್ತು ಶಾಶ್ವತವಾಗಿರಬೇಕಾದರೆ ಮಧುಸೂದನನ ಶಾಸನ ದಿಂದಲೇ ಸರಿ. ಅಂತಹ ಶ್ರೀಹರಿಯ ಸ್ವಚ್ಛಮಹಿಮೆಯನ್ನು ಕೇಳು'' ಎಂದು ಬ್ರಾಹ್ಮಣನಿಗೆ ಬುದ್ಧಿಹೇಳಿ ಮಂಗಳ ಮಾಡಿದ್ದಾರೆ. ಈ ಅಧ್ಯಾಯದಲ್ಲಿ ವಿಪ್ರ, ಶೇಷ, ಸೀತಾಪತಿ, ಶೇಷಾದ್ರಿ, ಭೂಪ ಮುಂತಾದ ಭಕ್ತರಿಗೆಲ್ಲಾ ನಿದರ್ಶನಗಳಲ್ಲಿ ವೃದ್ಧಿಕಂಡಿದೆ.

ಶ್ರೀವಾದಿರಾಜಗುರ್ವಂತರ್ಗತ ಶ್ರೀಮಧ್ವೇಶಾರ್ಪಣಮಸ್ತು

## ಷೋಡಶಾಧ್ಯಾಯ ಸಾರಾಂಶ

ಷೋಡಶಾಧ್ಯಾಯದಲ್ಲಿ 111 ಶ್ಲೋಕ. 8 ಪ್ರಕರಣಗಳು ಇವೆ. ಮೊದಲಮಾತು ಶೇಷನಿಗೆ. ''ಶೇಷ! ಉಷಃಕಾಲದಲ್ಲಿ ಆಖ್ಯಾನಪಾರಾಯಣ ಮಾಡು. ಅದು ನನ್ನ ಸೇವೆ. ಶೇಷಾದ್ರಿಪಂಡಿತನಿಗಿಂತ ನೀನೇ ಧೀರ. ನಿನಗೆ ಸ್ವಪ್ನವಾಗಿದೆ. ಅದು ನನ್ನ ಅನುಗ್ರಹ. ಅದರಂತೆ ವಿಪ್ರನಲ್ಲಿ ಶರಣು ಹೊಂದು. ಈ ಆಖ್ಯಾನ ಲಕ್ಷ್ಮೀಪತಿಯಿಂದ ಪ್ರವಚನ ಮಾಡಿಸಿ ನೀನೂ ಶ್ರವಣಮಾಡು. ಎಲ್ಲರಿಗೂ ಉಪಾದೇಯವೆಂದು ತೋರಿಸು. ನಿನಗೆ ಗುರುವಾದ ನನ್ನಲ್ಲಿ ಭಕ್ತಿ ಹೆಚ್ಚುತ್ತೆ. ಕೃಷ್ಣ ಒಲಿಯುತ್ತಾನೆ. ಕೃಷ್ಣನ ಗೋಪಾಲಮೂರ್ತಿ-ಯನ್ನು ಪ್ರಾತಃಕಾಲ ಧ್ಯಾನಮಾಡು. ನಾನು ನಿನಗೋಸ್ಕರ ದೇವರನ್ನು ಪ್ರಾರ್ಥಿಸಿದ್ದೇನೆ. ನಿನ್ನ ಮನೆಗೆ ಅಗ್ನಿಹೋತ್ರಿ ಬ್ರಾಹ್ಮಣ ಬರುತ್ತಾರೆ. ಆತನಲ್ಲಿ ಆಚಾರ್ಯ ಕರಾರ್ಚಿತ ಎರಡು ಪ್ರತಿಮೆಗಳಿರುತ್ತವೆ. ಅದರಲ್ಲಿ ಒಂದಾದ ವಿಟ್ಠಲ ಪ್ರತಿಮೆಯನ್ನು ನಿನಗೆ ಕೊಡುತ್ತಾನೆ. ಆಗಿನಿಂದ ನಿನ್ನ ಅದೃಷ್ಟ ಕುದುರುತ್ತದೆ. ನಿನ್ನ ಮಗನೂ ಅದೃಷ್ಟಶಾಲಿ''. ಇಷ್ಟು ಹೇಳಿ ವಿಪ್ರನಿಗೆ ಹೇಳುತ್ತಾರೆ. ''ತಪ್ಪು ಬರೆಯಿಸ ಬೇಡ. ನೀನು ನನ್ನ ಪಾದಕಮಲದ ಭ್ರಮರ. ನನ್ನ ಧ್ಯಾನದಿಂದ ನಿರ್ಮಲ ಮನಸ್ಕನಾಗು. ಐದು ಜನ್ಮ ಸಿಂಹದಂತೆ ಮೆರಿ. ಆಖ್ಯಾನ ಪುರಾಣ ಹೇಳು. ನಿನ್ನನ್ನು ಕೈಬಿಡೋದಿಲ್ಲ ಎಂದಿದ್ದಾರೆ. ಅನಂತರ ಪುನಃ ಶೇಷನಿಗೆ ಹಿತೋಕ್ತಿ ಇದೆ. ''ನನ್ನ ಅಭಿಪ್ರಾಯ ತಿಳಿಯದೇ ಖಂಡನೆ

ಏತಕ್ಕೆ ಮಾಡುತ್ತೀ ? ದುಡ್ಡಿನ ಆಸೆಯನ್ನು ಮಾಡಬೇಡ. ಪೂರ್ವದಲ್ಲಿ ಕುಮಾರಭಟ್ಟನಿಗೆ ವೇದದಲ್ಲಿ ಅಪ್ರಾಮಾಣ್ಯಶಂಕೆ ಬಂದುದರಿಂದ ಒಕ್ಕಣ್ಣನಾದ. ಈಗ ಎಂದರೆ ವೃಂದಾವನಾಚಾರ್ಯರ ಕಾಲದಲ್ಲಿ ಕಮಲನಾಭ ಜ್ಞಾನನೇತ್ರ ಕಳೆದುಕೊಂಡು ನರಕಕ್ಕೆ ಬೀಳುತ್ತಾನೆ. ಈ ತಮ್ಮಣ್ಣನಿಗೂ ನನ್ನ ಋಜುತ್ವದಲ್ಲಿ ಸಂಶಯ. ಪ್ರೀತಿಯಿಂದ ಆಖ್ಯಾನವನ್ನು ಪಠಿಸುವುದಿಲ್ಲ, ಅವನಿಗೆ ಶುಭವಾಗುವುದಿಲ್ಲ, ಅವನು ವಂಚಕ. ನಾಯಿಜನ್ಮ ಅವನಿಗೆ ಕಾದಿದೆ. ಇನ್ನು ಹೆಸರಿಗೆ ಶ್ರೀನಿವಾಸ. ಸ್ವಭಾವತಃ ನಿಃಶ್ರೀನಿವಾಸನಾದ ಒಬ್ಬ ಪಾಪಿ. ನನ್ನ ಋಜುತ್ವದ್ವೇಷಿ. ''ನಿತ್ಯಂ ಬ್ರಾಹ್ಮಣಸಂಬಂಧಿ ಸತ್ಯವಾಕ್ಯ ಮಯೋದಿತಮ್'' ಸತ್ಯವಾದ ಋಜುರ್ವೇದ ಸಂಹಿತೆಯ ಪ್ರಮಾಣ ಹೇಳಿದರೂ ಭ್ರಾಂತನಾಗಿಯೇ ಇದ್ದಾನೆ. ಶೇಷ! ಪೂರ್ವೋಕ್ತ ಮೂವರ ಸಂಗ ತ್ಯಜಿಸಿ, ಗುರುವಾದ ವಿಪ್ರನ ಪೂಜೆ ಮಾಡಿಕೊಂಡು, ಆಖ್ಯಾನ ಪಠಿಸು.'' ವಿಪ್ರನೇ ! ಶ್ರೀಮದನಗೋಪಾಲ ದೇವಾಲಯದಲ್ಲಿ ಆಖ್ಯಾನ ಓದು, ಅನ್ನ ಪರ್ಯಾಯದ ಸಾಮಗ್ರಿ ಎಲ್ಲಾ ಸಿಗುತ್ತೆ. ಶೇಷನ ಹೆಂಡತಿಯ ಗರ್ಭದಲ್ಲಿ ಹೆಣ್ಣು ಶಿಶು ಇತ್ತು. ಅದನ್ನು ಗಂಡು ಮಗುವನ್ನಾಗಿ ಮಾಡಿದ್ದೇನೆ. ಅಂಶದಿಂದ ಪುಂಸ್ತ್ವ ಸಿದ್ಧಿಗಾಗಿ ನಾನೇ ತತ್ವಮಾನಿಗಳಿಂದ ಸಹಿತವಾಗಿ ವಾಸಮಾಡಿದ್ದೇನೆ. ಪ್ರಸೂತಿಕಾಲದಲ್ಲಿ ಪ್ರಧಾನ ವಾಯುದೇವರ ವ್ಯಾಪಾರವನ್ನು ಮಾಡಿದ್ದೇನೆ. ಒಬ್ಬ ಶೂದ್ರ ಸೇವೆ ಮಾಡಿದ್ದ. ಅವನನ್ನೂ ಬ್ರಾಹ್ಮಣನನ್ನಾಗಿ ಹುಟ್ಟಿಸಿದ್ದೇನೆ. ''ಸಂಪೂಜ್ಯ ಬ್ರಾಹ್ಮಣಂ ಭಕ್ತ್ಯಾ ಶೂದ್ರೋಪಿ ಬ್ರಾಹ್ಮಣತಾಮಿಯಾತ್'' (ಅಪರೋಕ್ಷಿಜ್ಞಾನಿ ಬ್ರಾಹ್ಮಣರನ್ನು ಭಕ್ತಿಯಿಂದ ಸೇವಿಸಿದರೆ ಜನ್ಮಾಂತರದಲ್ಲಿ ಬ್ರಾಹ್ಮಣ್ಯವೇ ಬರುತ್ತದೆ) ಎಂಬ ಪ್ರಮಾಣ ಸತ್ಯ ಮಾಡಿದ್ದೇನೆ. ಆ ಜೀವನನ್ನು ಶೇಷನಿಗೆ ಔರಸಪುತ್ರನನ್ನಾಗಿಟ್ಟು ನಾನು ನಿಯಮನ ಮಾಡಿದ್ದೇನೆ. ಹೀಗೆ ಶೇಷನಿಗೆ ಗಂಡುಮಗುವೂ ಆಗಿದೆ. ಶೇಷನೇ ! ಕೃಷ್ಣಾಚಾರ್ಯಸುತ ಶ್ರೀನಿವಾಸಾಚಾರ್ಯನೂ ನನ್ನ ಋಜುತ್ವವನ್ನು ಒಪ್ಪುವುದಿಲ್ಲ. ಅಹಂಕಾರಿ, ದುರುಳ, ಆಖ್ಯಾನದಲ್ಲಿ ದೋಷ ಹುಡುಕುತ್ತಾನೆ. ಬ್ರಾಹ್ಮಣನಿಗೆ ಜ್ವರ ಏತಕ್ಕೆ ಬಂದಿತು ? ಎಂದು ಪ್ರಶ್ನೆ ಕೇಳುತ್ತಾನೆ ಪಾಪಿ. ಜ್ವರ ಪಾಪದಿಂದ ಬಂದಿಲ್ಲ, ಹೆಚ್ಚು ಕೆಲಸದಿಂದ ಬಂದಿದೆ. ವಿಶ್ರಾಂತಿ, ಉಪಚಾರಗಳಿಂದ ತಾನಾಗಿಯೇ ಹೋಗುತ್ತೆ. ಔಷಧ ಬೇಕಿಲ್ಲ. ಆದರೂ ಪಾಪಾತ್ಮನು ಆಖ್ಯಾನಮಂತ್ರವೇ ಅಲ್ಲ ಎಂದು ಅಲ್ಲಗಳೆಯುತ್ತಾನೆ. ವಿಪ್ರಕಲ್ಪಿತ ಎನ್ನುತ್ತಾನೆ. ಆದರೆ ಆಖ್ಯಾನ ಪಠನೆ ಸಂಸಾರ ದುಃಖಮೂಲವನ್ನೇ ಕತ್ತರಿಸುತ್ತೆ. ಪಾಪವನ್ನೂ ಸುಡುತ್ತೆ. ಜ್ವರ ಶ್ರಮದಿಂದ ನನಗೂ ಬಂದಿತ್ತು, ಅದೇನು ಮಾಡುತ್ತೆ ? ಅಜ್ಞಾನಿ ವಿಪ್ರ ಶ್ಲೋಕ ಹೇಗೆ ಮಾಡುತ್ತಾನೆ ? ಪಾಪಿಗಳು ಪ್ರತ್ಯಕ್ಷ ವಿರುದ್ಧವಾಗಿ

ಅಪಲಾಪ, ನಿಂದೆ ಮಾಡುತ್ತಾರೆ. ವಿಪ್ರ ತೇಜಸ್ವಿಯಾಗಿಯೇ ನಿರೋಗಿಯಾಗಿಯೇ ಇದ್ದಾನೆ. ಅದನ್ನು ನೋಡುತ್ತಿದ್ದರೂ, ಸ್ವಲ್ಪ ಮೈ ಬೆಚ್ಚಗಾದ ಮಾತ್ರಕ್ಕೆ ವಿಷಮಜ್ವರ ಬಂದಂತೆ ಗಲಾಟೆ ಮಾಡಿ ಆಖ್ಯಾನವೇ ಮಂತ್ರವಲ್ಲ ಎಂದು ನಿಂದಿಸುತ್ತಾರೆ. ಇಂತಹ ನಿಂದಕರು ಹೊಟ್ಟೆಕಿಚ್ಚಿನ ಪಾಪಿಗಳು. ವಿಪ್ರನೇ ! ನಿನ್ನ ಜ್ವರ ಪೂರ್ತಿಯಾಗಿ ನಿಂತು ನಿನ್ನ ಶ್ರಮವೂ ಶಾಂತವಾಗಲಿ. ನಂತರವೇ ಸ್ವಪ್ನದಲ್ಲಿ ಶ್ಲೋಕೋಪದೇಶಮಾಡುತ್ತೇನೆ. ''ಅಸ್ಪಷ್ಟ ಭಾಷೆಯಿಂದ ಸ್ವಪ್ನೋಪದೇಶವೇತಕ್ಕೆ ? ಸ್ಪಷ್ಟವಾಗಿಯೇ ಎಲ್ಲರ ಹಣೆ ಬರಹವನ್ನು ಹೇಳಿಬಿಡಲಿ'' ಎಂದೂ ಕೃಷ್ಣಾಚಾರ್ಯಪುತ್ರ ಶ್ರೀನಿವಾಸ ನಿಂದಿಸುತ್ತಾನೆ. ಅದು ಅನ್ಯಾಯದ ನಿಂದೆ. ಭವಿಷ್ಯಾರ್ಥಬೋಧಕ ವಾಕ್ಯಗಳು ಅಸ್ಪಷ್ಟವಾಗಿಯೇ ಇರಬೇಕು. ''ಪರೋಕ್ಷಪ್ರಿಯಾ ಇವ ಹಿ ದೇವಾಃ ಪ್ರತ್ಯಕ್ಷದ್ವಿಷಃ'' ಎಂದು ಶ್ರುತಿಯೇ ಇದೆ. ಪರೋಕ್ಷವೆಂದರೆ ಅಸ್ಪಷ್ಟತೆ. ಹಾಗೆ ಹೇಳುವುದೇ ದೇವಸ್ವಭಾವ. ಭವಿಷ್ಯಬೋಧನೆಗೂ ಅದೇ ಯೋಗ್ಯ. ಆದ್ದರಿಂದ ದುರ್ಜನರ ನಿಂದೆಗೆ ನನ್ನ ಭಕ್ತರು ಕಿವಿಗೊಡಬಾರದು. ಒಂದರ್ಥ ತೋರಿ ಅದು ಬಾಧಿತವಾದರೆ, ಇನ್ನೊಂದು ರೀತಿ ಅರ್ಥಮಾಡಲಿ, ಅದೂ ಬಾಧಿತವಾದರೆ ಅಂತರ್ಯಾಮಿ ಪರ ಅರ್ಥಮಾಡಲಿ. ಅಪ್ರಾಮಾಣ್ಯ ಸಂಶಯವನ್ನೇ ಮಾಡಿದರೆ ಪಾಪಿಯಾಗಿ ನರಕಕ್ಕೆ ಹೋಗಿ ನಾಯಿಯಾಗಿ ಹುಟ್ಟುತ್ತಾನೆ. ಮದಾಂಧರಿಗೆ ಅದೇ ಗತಿ. ಜ್ಞಾನಿಗಳು ವಿನಯ ಅನಹಂಕೃತಿಗಳಿಂದ ಯೋಗ್ಯಾರ್ಥ ಹುಡುಕುವವರ ಜೊತೆಯಲ್ಲಿದ್ದು ಅಜ್ಞಾನ ಹೀನರಾಗಿ ನನ್ನನ್ನು ಬಹುಮಾನ ಮಾಡುತ್ತಾರೆ. ಯೋಗ್ಯಾರ್ಥವನ್ನೇ ತಿಳಿಯುತ್ತಾರೆ. ಅಂತಹ ಜ್ಞಾನಿಗಳು ಪೂಜ್ಯರು. ಅಜ್ಞಾನಿಗಳ ಪ್ರಸಂಗ ಸಾಕು. ''ಲಕ್ಷ್ಮೀಪತೇ ! ನೀನು ಅಂತಹ ಸಜ್ಜನರನ್ನು ಸಭೆಯಲ್ಲಿ ಸುಖಪಡಿಸು. ದೇವರೂ, ದೇವತೆಗಳೂ, ಗುರುಗಳೂ ಯಾರವಿಷಯದಲ್ಲಿ ಪ್ರಸನ್ನರಾಗಿಲ್ಲವೋ ಅಂತಹವನಿಗೆ ನನ್ನ ವೃಂದಾವನವು ಒಳ್ಳೇ ಕಲ್ಲಿನದು. ಚೆನ್ನಾಗಿ ಕಟ್ಟಿದ್ದಾರೆ ಎಂದು ಮಾತ್ರ ತೋರುತ್ತದೆ. (81) ಪಾಪನಾಶಕ ಕ್ಷೇತ್ರ, ಜಗನ್ನಾಥನ ಪರಮಾಧಿಷ್ಠಾನ, ಅಂತರ್ಯಾಮಿ ಋಜುದೇವತೆಯ ವರ್ಚಸ್ಸಿನಿಂದ ಸರ್ವಫಲಪ್ರಾಪ್ತಿಯಾಗುತ್ತದೆಂದು ಸ್ಮರಣೆಗೇ ತಂದು ಕೊಡುವುದಿಲ್ಲ. ಏಕೆಂದರೆ ಅವರು ನನ್ನ ಶಾರದಾ ದ್ರೋಹಿಗಳು. ಆಖ್ಯಾನ ನಿಂದಕರು. ಭೂಮಿಯಲ್ಲಿ ಕಳ್ಳತನದ ಜೀವಿಗಳು. ನರಕಕ್ಕೆ ಹೋಗುವುದಕ್ಕೇ ಹುಟ್ಟಿದವರು. ಈ ವಾಸುದೇವಮುನಿ ಅಂತಹವನಲ್ಲ. ಗುರುರಾಜರು ವೃಂದಾವನಕ್ಕೆ ಹೋದರೆ ದೇಹತ್ಯಾಗ ಮಾಡಿಬಿಡುತ್ತೇನೆಂದು ಇದ್ದ. ತೀರ್ಥ ಯಾತ್ರೆಗೆ ಹೋಗಿದ್ದ. ವಾಪಸ್ಸು ಬಂದಾಗ ವಾದಿರಾಜರು ವೃಂದಾವನದಲ್ಲಿದ್ದರು. ತುಂಬ ಸಂಕಟಪಟ್ಟ. ವೃಂದಾವನದ ಸುತ್ತಲೂ

ಪ್ರದಕ್ಷಿಣೆ ಮಾಡಿ ಹನುಮಾದಿ ನಾಲ್ವರ ನಮಸ್ಕಾರ ಮಾಡಿ ಪಕ್ವಫಲದಂತೆ ಇದ್ದಾನೆ. ಪ್ರಾರಬ್ಧನೀಗಿ ಸದ್ಗತಿಗೇ ಹೋಗುತ್ತಾನೆ. ಹಯಗ್ರೀವದೇವರ ಪ್ರಸಾದದ ಫಲ. ಅಂತಹ ಹಯವದನ ಸ್ವಾಮಿಯ ಪ್ರಸಾದವನ್ನು ನಾನೂ ಸಂಪಾದಿಸಿದ್ದೇನೆ. ಆ ಸ್ವಾಮಿಯು ''ವಾದಿರಾಜ ! ಭಯಪಡಬೇಡ'' ಎಂದು ತನ್ನ ಕೈಯನ್ನು ನನ್ನ ತಲೆಯಮೇಲೆ ಇಟ್ಟಿದ್ದಾನೆಂದಮೇಲೆ ಯಾವುದು ಅಸಂಭಾವಿತ ? ಅಸಂಭಾವನಯಾ ತಸ್ಮಾದ್ ವೈಭವಂ ನ ಪರಾಹತಮ್''. (ಅಜ್ಞಾನಿಗಳು ಅಸಂಭಾವಿತವೆಂದು ನನ್ನ ಮಹಿಮೆಯನ್ನು ಅಲ್ಲಗಳೆದಮಾತ್ರಕ್ಕೆ ಆ ಮಹಿಮೆಯು ಸುಳ್ಳಾಗುವುದಿಲ್ಲ). ''ಎಲೈ ಪಾಪಪುರುಷರೇ ! ಯಮನ ದಂಡ ನಿಮ್ಮನ್ನು ಕರೆಯುತ್ತಿದೆ. ಅದಕ್ಕೇ 'ನಾನೂ ಶ್ಲೋಕಮಾಡಬಲ್ಲೆ'' ಎನ್ನುತ್ತೀರಿ. ಪಾಪನಾಶಮಾಡಿ ಶೋಕಪರಿಹರಿಸಿ ಚಿತ್ತಶುದ್ಧಿ ಕೊಡುವ ಶ್ಲೋಕವೊಂದನ್ನಾದರೂ ರಚಿಸುವ ಯೋಗ್ಯತೆ ನಿಮಗಿದೆಯೇ ? ನೀವು ಬರೆದ ಶ್ಲೋಕ ಮಂತ್ರಸದೃಶವಾಗುತ್ತದೆಯೇ ? ನಾನು ಲಕ್ಷಶ್ಲೋಕ ಮಂತ್ರದಂತೆ ಹೇಳಿ ವಿಪ್ರನಬಾಯಿಂದ ಒಂದೆರಡನ್ನು ಹೇಳಿಸುತ್ತೇನೆ. ನೀವು ಕೃತ್ರಿಮ ಶ್ಲೋಕರಚಿಸಿದರೆ ಓದುವವರಿಗೆ ಪಾಪ, ಕರ್ತನಿಗೆ ಆಯುರ್ಹಾನಿ, ಅಕಾಲಮರಣ ಮುಂತಾದ ದುಃಖವಾಗುತ್ತೆ, ಇಷ್ಟರ ಮೇಲೆ ನೀವು ಬೇಕಾದಂತೆ ಮಾಡಿ''. ಈ ಪ್ರಸಂಗದಲ್ಲಿ ಒಬ್ಬ ಮೂರ್ಖನು ಮರಳಿ ಸನ್ಮಾರ್ಗಕ್ಕೆ ಬಂದ ನಿದರ್ಶನ ಹೇಳುತ್ತಾರೆ.(101-104 ಶ್ಲೋಕಗಳು) ಗುರುರಾಜರನ್ನು ಮೊದಲು ಅವಜ್ಞೆ ಮಾಡಿದ್ದರೂ ಪುನಃ ಪಶ್ಚಾತ್ತಾಪದಿಂದ ಸೇವೆಯನ್ನು ಮಾಡಿದ್ದರಿಂದ ಅವನ ಪಾಪ ಭಸ್ಮವಾಯಿತು. ಅವನ ಪಾಂಡಿತ್ಯವು ಪ್ರಜ್ವಲಿಸಿತು. ಅವನು ಸಿಂಹದಂತೆ ಅಜ್ಞಾನಿಗಳಿಗೆ ಭಯಂಕರನಾದ. ರಾಜಾದಿಗಳಿಗೆ ಇವನ ಹೊಸ ಪಾಂಡಿತ್ಯ ಏನೂ ಗೊತ್ತಾಗಲಿಲ್ಲ. ಎಂದರೆ ಇವನಿಗೆ ಖ್ಯಾತಿ ಬರಲಿಲ್ಲ. ಆದರೂ ನಾನು ಅವನನ್ನು ವಿಪ್ರ ಶೇಷಾದಿಗಳ ನಂತರ ಗಣನೀಯವಿದ್ವಾಂಸನೆಂದು ತಿಳಿದು ಪಾಲಿಸುತ್ತೇನೆ ಎಂದಿದ್ದಾರೆ. ಹೀಗೆ ಈ ಅಧ್ಯಾಯದಲ್ಲಿ ನಿದರ್ಶನ- ನಂಬಿದವರು, ನಿಂದಕರು ತುಂಬಿಹೋಗಿದೆ.

ಶ್ರೀವಾದಿರಾಜಗುರ್ವಂತರ್ಗತ ಮಧ್ವೇಶಾರ್ಪಣಮಸ್ತು

## ಹದಿನೇಳನೆಯ ಅಧ್ಯಾಯ ಸಾರಾಂಶ

ಹದಿನೇಳನೆಯ ಅಧ್ಯಾಯದಲ್ಲಿ 116 ಶ್ಲೋಕ, 16 ಪ್ರಕರಣಗಳಿವೆ. ಪ್ರಬಲ ನಿದರ್ಶನಗಳನ್ನು ಹೇಳುತ್ತಾರೆ. ತಮಗೆ ಮುಖ್ಯಪ್ರಾಣಮಿತ್ರತ್ವ ತೋರಿಸಿದ್ದಾರೆ. ಮೊದಲು ಭೂಪಾದಿಗಳಿಗೆ ವಿಪ್ರನ ಪೂಜೆಯನ್ನು ಮಾಡಬೇಕೆಂದು ತೋರಿಸಲು ವಿಪ್ರನ ಮಹತ್ವವನ್ನು ವರ್ಣಿಸಿದ್ದಾರೆ. ''ನನ್ನ ನಿತ್ಯ ದರ್ಶನದಿಂದ ವಿಪ್ರ ನಿರ್ಮಲ

ಚಿತ್ತನಾಗಿದ್ದಾನೆ. ನಿರಂತರ ನನ್ನ ಧ್ಯಾನವನ್ನು ಮಾಡುತ್ತಾನೆ. ಕಾಶೀಮರಣದ ನಂತರ ಪುಣ್ಯ ಸಂತತ ಅವನಿಗೆ ಉಂಟಾಗುತ್ತೆ. ಸ್ವಚ್ಛಜ್ಞಾನಿ. ನನ್ನ ಸೇವೆಯನ್ನಂತೂ ಮಾಡುತ್ತಲೇ ಇದ್ದಾನೆ. ಇಷ್ಟಾದರೂ ಅವನ ಬಡತನ ಹೋಗಿಲ್ಲ. ಅದರ ಜೊತೆಗೆ ಶ್ಲೋಕಕರ್ತಾ ಎಂದು ಅಪಖ್ಯಾತಿ ಬೇರೆ. ವಿಪ್ರನಿಗೆ ತಾನು ಬರೆಯಿಸಿದ್ದು ಏನು ಎಂದು ಕೂಡ ಗೊತ್ತಿಲ್ಲ. ಕವಿಗೆ ಅರ್ಥಜ್ಞಾನ, ಶಬ್ದರಚನೆ ಎರಡೂ ತಿಳಿದಿರುತ್ತೆ. ವಿಪ್ರನಿಗೆ ಎರಡೂ ಇಲ್ಲ. ಆದ್ದರಿಂದ ಕೃತಿ ಕೇವಲ ನನ್ನದೇ. ಪ್ರಚಾರ ಕಾರ್ಯ ವಿಪ್ರ ಚೆನ್ನಾಗಿ ಮಾಡಿದರೂ ಸಂಬಳ ಹೆಚ್ಚಲಿಲ್ಲ. ಶೇಷಾದ್ರಿ ಸಹಾಯಮಾಡಲಿಲ್ಲ. ಸೀತಾಪತಿಯಾದರೂ ಸ್ವಲ್ಪ ಸಹಾಯಮಾಡಲಿ. ಇಲ್ಲದಿದ್ದರೆ 'ಆಚಾರ್ಯ' ಎಂದು ನನ್ನಿಂದ ಬಿರುದು ಸಂಪಾದಿಸಿ ಭಿಕ್ಷೆಗೆ ಹೋಗಬೇಕಾಗುತ್ತೆ. ಶೇಷ ! ನೀನಾದರೂ ಔದಾರ್ಯ ತೋರಿಸು. ಹೊಗಳಬೇಡಿ ಎಂದು ನನ್ನನ್ನೇ ನಿಷೇಧಿಸಬೇಡ. ಅಂತರ್ಯಾಮಿ ವಿವಕ್ಷೆಯಿಂದ ಗುರುಗಳು ಶಿಷ್ಯನನ್ನು ಸ್ತುತಿಸಿದರೆ ಅವನಿಗೆ ಶುಭವಾಗುತ್ತೆ. ನನ್ನ ವೃಂದಾವನ ಪ್ರಸಿದ್ಧಿಗೆ ಬರುತ್ತದೆಂದು ನಾನು ಹೇಳಿದ್ದೆ. ಹಾಗೇ ಆಗಿದೆ, ವಿಪ್ರನಿಗೂ ವೃಂದಾವನದ ಹೆಸರು ಬಂದಿದೆ ನೋಡು. ಆತನನ್ನು ವೃಂದಾವನಾಚಾರ್ಯರೆಂದು ಕರೆಯದವರನ್ನು ದಂಡಿಸು.'' ನಂತರ ಶ್ರೀಪತಿಗೆ ವಿಪ್ರನ ಸತ್ಕಾರ ಮಾಡೆಂದು ಪ್ರೀತಿಯಿಂದ ಪ್ರೇರೇಪಿಸುತ್ತಾರೆ. ವಾಸುದೇವ ಮುನಿಗಾದರೂ ಹೇಳಿ ಸಕುಟುಂಬ ವಿಪ್ರನಿಗೆ ಭೋಜನಮಾಡಿಸು ಎಂದು ಹೇಳುತ್ತಾರೆ. ''ಒಂದು ತಿಂಗಳು ವಾಸುದೇವಮುನಿಯ ಸತ್ಕಾರವನ್ನು ಸ್ವೀಕರಿಸು'' ಎಂದು ವಿಪ್ರನಿಗೂ ಹೇಳುತ್ತಾರೆ. ಅಂತೂ ಕಾಲವಿಶೇಷದಲ್ಲಿ ವಿಪ್ರನಿಗೆ ತುಂಬ ಕ್ಲೇಶವಿತ್ತೆಂದು ಊಹೆಗೆ ಬರುತ್ತೆ. ಶ್ರೀಪತಿ ಹೇಳಿದಂತೆ ಮಾಡಿ ವಿಪ್ರನಿಗೆ ಅನ್ನ ಕೊಡಿಸಿದ್ದಾನೆಂದು ಸಂತೋಷದಿಂದ ಹೇಳುತ್ತಾರೆ. ''ಏನಾದರೇನು? ಸದಾ ಅಗಣ್ಯಗುಣನಾದ ನನ್ನನ್ನು ರಕ್ಷಕನೆಂದು ಸ್ಮರಿಸು'' ಎಂದಿದ್ದಾರೆ. ''ವಿಪ್ರನೇ, ನಿನ್ನ ಹೊಟ್ಟೆ ನೋವನ್ನು ಪರಿಹರಿಸಿದ್ದೇನೆ. ನಿನ್ನ ಮಗಳ ಉದರಶೂಲೆ ಸಹ ಒರೆಸಿಬಿಟ್ಟಿದ್ದೇನೆ. ಆದ್ದರಿಂದ ನನ್ನನ್ನು ಭಜಿಸು. ಮಗ ಬರಲಿಲ್ಲವಲ್ಲಾ ಎಂಬ ಚಿಂತೆ ಬಿಡು'' ಎಂದಿದ್ದಾರೆ. ಸಂಸಾರಸಮುದ್ರದಲ್ಲಿ ನೌಕೆಯ ಹುಟ್ಟಿನಂತೆ ಹರಿಜ್ಞಾನ ಅದನ್ನು ಹೊಂದು. ಅಂತಹ ಜ್ಞಾನ ಕುಮಾರಭಟ್ಟನಿಗೆ ಇರಲಿಲ್ಲ. ''ನೀನು ಹಾಗಾಗಬೇಡ, ನನ್ನ ವಾಕ್ಯದಲ್ಲಿ ದೋಷ ಹುಡುಕಬೇಡ. ನಾಯಿಯಂತಿರುವ ಜನರ ಮಾತನ್ನು ಕೇಳಬೇಡ.'' ''ಹೇ ತಮ್ಮಣ್ಣ! (ಈ ತಮ್ಮಣ್ಣ ಬೇರೆ. ಇವನು ವಿಪ್ರನ ಅನುಯಾಯಿ) ಆಖ್ಯಾನ ಶ್ರವಣಮಾಡು. ಇಲ್ಲದಿದ್ದರೆ ನರಕ ತಪ್ಪುವುದಿಲ್ಲ. ಆಗಲೂ ನಾನೇ ಬಿಡಿಸಬೇಕಾಗುತ್ತೆ. ಆದುದರಿಂದ

ಭುಜಗೇಶ್ವರನೆಂದು ತಿಳಿದು ನನ್ನನ್ನು ಭಜಿಸು'' ''ಹೇ ಭೂಪ ! ಪೂರ್ವದಲ್ಲಿ ದಾನಮಾಡಿದ ಕೇದಾರಗ್ರಾಮವನ್ನು ಬಿಟ್ಟುಕೊಡು. ಹಾಗೆ ಮಾಡಿದರೆ ಆಯುರಾದಿ ಸರ್ವವೃದ್ಧಿ ಆಗುತ್ತೆ.'' ''ಸ್ವದತ್ತಾತ್‌ದ್ವಿಗುಣಂ ಪುಣ್ಯಂ ಪರದತ್ತಾನುಪಾಲನೇ'' (ಕಂಡವರು ಮಾಡಿದ್ದ ದಾನ ರಕ್ಷಣೆ ಮಾಡಿದರೆ, ತಾನೇ ಅಷ್ಟು ದಾನಮಾಡಿದ್ದಕ್ಕಿಂತ ಎರಡರಷ್ಟು ಪುಣ್ಯವನ್ನು ಹೊಂದುತ್ತಾನೆ) ಎಂದು ಶಾಸ್ತ್ರವಿದೆ. ಆ ಗ್ರಾಮವನ್ನು ಬಿಟ್ಟುಬಿಡು. ಶತ್ರುವನ್ನು ಜಯಿಸು. ಆ ಶತ್ರುಧನವನ್ನು ಅಪಹರಿಸಿ ನಿನ್ನ ಕೋಶವನ್ನು ಭರ್ತಿಮಾಡಿಕೋ. ಬ್ರಾಹ್ಮಣರ ಜಮೀನಿಗೆ ಕಂದಾಯ ಹಾಕಬೇಡ''. ಅನಂತರ ವಿಪ್ರನಿಗೆ ಹೇಳುತ್ತಾರೆ. ''ವಿಪ್ರನೇ ! ನಿನ್ನ ಪ್ರಾಣ ಕಂಠಗತವಾಗಿದೆ. ಆದರೆ ನಿನ್ನನ್ನು ನಾನು ಉಳಿಸುತ್ತೇನೆ. ಶರಣಂ ವ್ರಜಮಾಂ ಮುನಿಂ (ನನ್ನನ್ನು ಶರಣು ಹೊಂದು) (55) ನಿನ್ನ ಸಹಾಯಕ ಕೃಷ್ಣಭಟ್ಟನಿಗೂ ಶುಭವಾಗುತ್ತದೆ. (ಪೂರ್ವ ಕೃಷ್ಣಭಟ್ಟನಾದ ನಿನಗೆ ಎಂದಾದರೂ ಅರ್ಥಮಾಡಬಹುದು) ನಿನ್ನ ಆಚಾರ್ಯನಾಮ ಅನ್ವರ್ಥವಾಯಿತು. (58), ಹೀಗೆ ಹೇಳಿ ವಿಪ್ರನ ಮರಣವನ್ನು ತಪ್ಪಿಸಿದ್ದಾರೆ.

''ಹೇ ಸೂರ್ಯ ! ಆಖ್ಯಾನ ಪಾರಾಯಣಮಾಡು. ನಿನ್ನ ಬುದ್ಧಿ ವಿಕಾಸ ಹೊಂದುತ್ತದೆ.'' ''ಲಕ್ಷ್ಮೀಪತೇ ! ಸೂರ್ಯನಿಗೆ ಹೇಳಿಕೊಡು.'' ''ಹೇ ಉಪೇಂದ್ರಭಟ್ಟ ! ಕಾಮಧೇನು ಶ್ಲೋಕವನ್ನು ಸರ್ವದಾ ಪಠಿಸು, ಆಖ್ಯಾನ ಪಾರಾಯಣ ಮಾಡುತ್ತಿದ್ದೀ. ಹಾಗೆ ಮಾಡು. ಹಿರಣ್ಯಭಟ್ಟನೂ ಹಾಗೇ. ಸ್ವಲ್ಪ ಪಾರಾಯಣ ಮಾಡಿದರೂ ನನ್ನ ಪ್ರೀತಿವಿಷಯನಾಗಿದ್ದಾನೆ.'' ''ಸರಸಭಾರತೀ ನರಸಿಂಹನಿಗೆ ಏನು ಬಂತು? ಸರಸಭಾರತೀ ವಿಲಾಸವನ್ನು ಕಂಠಪಾಠ ಮಾಡಿದ್ದಾನೆ. ಆಖ್ಯಾನವನ್ನು ಮಾತ್ರ ಉಪೇಕ್ಷೆ ಮಾಡುತ್ತಾನೆ.'' ''ದಾಂಬಲದ ಹರಿನಾರಾಯಣರು ದುರ್ಬುದ್ಧಿಗಳು. ವಿಪ್ರನನ್ನು 'ಆಚಾರ್ಯ' ಎಂದು ಕರೆಯುವುದಿಲ್ಲ, ಸುಧಾ ಆಗಿದೆ ಎಂದು ಜಂಭವನ್ನು ಮಾಡುತ್ತಾರೆ. ಅವರು ಮದಾಂಧರು. ಆಖ್ಯಾನದ್ವೇಷಿಗಳು.'' ''ಲಕ್ಷ್ಮೀಪತಿ ಮಾತ್ರ ಹಾಗಲ್ಲ, ಲೇಖನ ಮತ್ತು ವಾಚನಗಳಿಂದ ಪುಣ್ಯಗಳಿಸುತ್ತಾನೆ.'' ಹೇ ವಿಪ್ರ ! ನಿನ್ನ ಮಗನ ಕಾಲುಬಳೆ ಹೋಯಿತು. ಸ್ತ್ರೀವಶವಾಯಿತು. ನಂತರ ಯಮನ ಪಾಲಾಯಿತು. ಇಂತಹ ಲೌಕಿಕ ಇನ್ನು ಹೇಳುವುದಿಲ್ಲ, ಈಗ ಜನರು ಆಖ್ಯಾನದ ವಿಷಯದಲ್ಲಿ ತುಂಬ ಗರ್ವದ ಮಾತುಗಳನ್ನು ಆಡುತ್ತಾರೆ. ಒಬ್ಬ ಇದು ವಿಪ್ರನ ಕೃತಿಯೇ ಎನ್ನುತ್ತಾನೆ. ಇನ್ನೊಬ್ಬ ಅಲೌಕಿಕ ಗುರುಕೃತ, ಲೌಕಿಕ ವಿಪ್ರಕೃತ ಎನ್ನುತ್ತಾನೆ. ತಮ್ಮಣ್ಣ 'ಈ ವಿಪ್ರ ಎಲ್ಲಾ ಕಡೆ ಏಕೆ ತನ್ನ ದಾರಿದ್ರ್ಯವನ್ನು ವರ್ಣಿಸುತ್ತಾನೆ?' ಎಂದು ನಿಂದಿಸುತ್ತಾನೆ. ಇವರೆಲ್ಲರೂ ಹೊಟ್ಟೆಗಿಚ್ಚಿನ ಪಾಪಿಗಳು. 'ಆಖ್ಯಾನ ಆರ್ಷೇಯ, ಅನಿಂದ್ಯ' ಎಂದು ತಿಳಿದಿಲ್ಲ, ''ಹೇ

ಶ್ರೀಪತೇ ! ನಿನಗೆ ಲಕ್ಷ್ಮೀಕಟಾಕ್ಷ ಆಗುತ್ತದೆ. ವಿಪ್ರನನ್ನು ನೋಡಿಕೋ. ಅವನಿಗೆ ಒಂದು ಗಂಡಾಂತರ ಕಳೆಯಿತು. ಅಲ್ಲಿವರೆಗೆ 'ವಿಪ್ರಪ್ರಾಣಾವಧಿ' ಎಂಬ ನನ್ನ ಪ್ರತಿಜ್ಞೆ ಪೂರ್ಣವಾಯಿತು. ಇನ್ನೊಂದು ಪ್ರಾಣಾವಧಿ ಪರ್ಯಂತ ಹೇಳುತ್ತೇನೋ ಇಲ್ಲವೋ, ಪ್ರತಿಜ್ಞಾಹಾನಿಯಂತೂ ತಪ್ಪಿತು. ''ಬ್ರಾಹ್ಮಣಸ್ಯ ಕೃತೇ ಮಾಸ್ತದಂತರ್ಯಾಮಿಣೋ ಮಮ'' (ಬ್ರಾಹ್ಮಣನಿಗೆ ಮಾಡಿದ ಮರ್ಯಾದೆ ಅಂತರ್ಯಾಮಿಯಾದ ನನಗೇ ಆಗುತ್ತೆ) ಎಂಬ ಶ್ಲೋಕವನ್ನು ನೀನು ಅಲ್ಲಲ್ಲಿ ಪಠಿಸು. ಜನರ ಸ್ವರೂಪ ಹೊರಬೀಳುತ್ತದೆ. ಮಠದ ಭೂಮಿಯನ್ನು ಆಕ್ರಮಿಸುವವರು ಹಾಳಾಗುತ್ತಾರೆ.''

''ಲಕ್ಷ್ಮೀಪತೇ ! ನಿನಗೆ ಯಾವ ಗಾಳಿ ಬೀಸಿತು ? ಮಠದ ದಕ್ಷಿಣಭಾಗದ ಭೂಮಿಯನ್ನು ಸ್ವಲ್ಪ ಆಕ್ರಮಿಸಿದ್ದೀ. ಬಿಟ್ಟು ಬಿಡು. ನನ್ನ ಶಿಷ್ಯರೆಲ್ಲರೂ 'ಆಚಾರ್ಯ' ಎಂದೇ ಬ್ರಾಹ್ಮಣನನ್ನು ಗೌರವಿಸುತ್ತಾರೆ. ಈ ದಾಂಬಲ ನಶ್ಯ ಚಟದ ಬ್ರಾಹ್ಮಣಾಧಮ. ಹೃದಯದಲ್ಲಿ ಹಾಲಾಹಲಯುಕ್ತನು. ಅವನ ಮಗ ನಾರಾಯಣನೂ ಹಾಗೆಯೇ. ಅವರು ವೃಂದಾವನಾಚಾರ್ಯರೆಂದು ಸಂಬೋಧನೆ ಮಾಡಿದರೆ ನಾಲಿಗೆ ಸುಟ್ಟಂತೆ ತಿಳಿಯುತ್ತಾರೆ. ಕ್ರೂರವಾದ ಭರಣೀ ನಕ್ಷತ್ರದಲ್ಲಿ ಹುಟ್ಟಿದವನು ಆ ನಾರಾಯಣ. ತಂದೆ ಮಕ್ಕಳಿಬ್ಬರೂ ನನ್ನ ಪಾದ ಸ್ಮರಿಸುವವನು ಪಾಪಿ ಎನ್ನುತ್ತಾರೆ. ಇನ್ನು ಚಿಂತಾಮಣಿ ಆಚಾರ್ಯನಾಮಕನು ಶ್ರುತಿಗಳಿಗೆಲ್ಲಾ ಸ್ತ್ರೀ ಪರವಾಗಿ ಅರ್ಥಯೋಜನೆ ಮಾಡುವವನು. ಅನ್ಯಾಯ ಮಾಡಿ ವಂಚನೆಯಿಂದ ದುಡ್ಡುಮಾಡಿಕೊಂಡು ಕಾಡಿಗೆ ಓಡಿ ಹೋಗಿದ್ದಾನೆ. ಇಂತಹ ಪಾಪಿಯ ಮಗನಾದರೂ ಆ ಚಿಂತಾಮಣಿಯ ಪುತ್ರ ಆಖ್ಯಾನ ಪಾರಾಯಣ ಮಾಡಿದರೆ ಅವನ ಸಮಾನವಿಲ್ಲವೆನಿಸಿಬಿಡುತ್ತೇನೆ. ಇನ್ನು ಭಕ್ತ ಕೃಷ್ಣ ಇದ್ದಾನೆ. ಅವನು ಸಾಧು. ಹೇ ಸೀತಾಪತೇ ! ನಿನ್ನ ಭಕ್ತಿ ಬೆಳೆದು ಹೋಗಿದೆ. ಮಗ, ಅಳಿಯ ಎಲ್ಲರೂ ನನ್ನ ಭಕ್ತರೇ. ನೂರುವರ್ಷ ಬಾಳು ಎನ್ನುತ್ತಾರೆ. ''ಹೇ ವಿಟ್ಠಲ ! ಬ್ರಾಹ್ಮಣನನ್ನು ಮುಂದಕ್ಕೆ ತರುವುದಿಲ್ಲವಲ್ಲ. ಅವನಿಗೆ ಬೇಕಾದ್ದನ್ನು ಮಾಡಿದರೆ ನಿನಗೆ ಎಲ್ಲಾ ಚೆನ್ನಾಗಿರುತ್ತೆ. ದುಡ್ಡು ಉದಾರ ಸ್ತ್ರೀ ಮೂಲಕ ಬರುತ್ತೆ.'' ಹೀಗೆ ಎಲ್ಲಾ ಶಿಷ್ಯರಿಗೂ ಬುದ್ಧಿ ಹೇಳಿ ಅವರನ್ನು ಹೊಗಳಿದ್ದಾರೆ. ಶಿಷ್ಯರನ್ನೇಕೆ ಹೊಗಳಬೇಕೆಂದು ಶಂಕಿಸುವವರಿಗೆ ಹೇಳುತ್ತಾರೆ. ''ಗುಣವುಳ್ಳ ಶಿಷ್ಯರ ಸ್ತವನ ಮಾಡಿ ಅವರ ಗುಣ ವೃದ್ಧಿ ಮಾಡುವುದೂ ಸ್ವಭಾವದೋಷಗಳನ್ನು ದೂಷಣ ಮಾಡುವುದೂ ಗುಣ. ಅದು ದೋಷವಲ್ಲ. ನಾನು ಸಾರಾಸಾರ ತಿಳಿದ ಹಂಸನಂತೆ, ಪರಮಹಂಸನಷ್ಟೇ ! ಸಚ್ಛಿಷ್ಯರ ಗುಣಸ್ತುತಿಮಾಡಿ ಅಸಜ್ಜನರನ್ನು ತ್ಯಜಿಸುತ್ತೇನೆ. ಆದರೆ ಭಾಗ್ಯಯುಕ್ತನೆಂದು ದೋಷಿ ಪುರಸ್ಕಾರ ಮಾಡುವುದಿಲ್ಲ. ದರಿದ್ರನೆಂದು ಗುಣಿಯನ್ನು ಉಪೇಕ್ಷಿಸುವುದಿಲ್ಲ. ನಾನು

''ರಾಗದ್ವೇಷರಹಿತ'' ಎಂದಿದ್ದಾರೆ. ಇದೆಲ್ಲಾ ಸೇವೆ ಮಾಡುವ ಭಕ್ತಜನರಿಗೆ ಗುಣವೃದ್ಧಿಮಾಡುವ ಗುರುರಾಜರ ಕೌಶಲ.

॥ ಶ್ರೀವಾದಿರಾಜಗುರ್ವಂತರ್ಗತ ಶ್ರೀಮಧ್ವೇಶಾರ್ಪಣಮಸ್ತು॥

## ಹದಿನೆಂಟನೆಯ ಅಧ್ಯಾಯಸಾರಾಂಶ

ಹದಿನೆಂಟನೆಯ ಅಧ್ಯಾಯ 108 ಶ್ಲೋಕ. 13 ಪ್ರಕರಣಗಳನ್ನುಳ್ಳದ್ದು.

ಗುರುರಾಜರು ಹೇಳುತ್ತಾರೆ. ವಿಪ್ರನೇ ಈ ಗ್ರಂಥ ದೈವಿಕ ಗ್ರಂಥ. ಮಂದರ ಪರ್ವತದಲ್ಲಿ ಶರ್ವಾದಿದೇವತೆಗಳು ಮೌರ್ವೀ ಸೌಟಿನಲ್ಲಿ ಹೋಮಮಾಡಿ ದೇವರನ್ನು ಪ್ರಾರ್ಥಿಸಿ ನನ್ನನ್ನು ಕೇಳಿಕೊಂಡಮೇಲೆ ನನ್ನಿಂದ ರಚಿತವಾದುದು. ಇದರ ಅರ್ಥ ಹಯಗ್ರೀವಮುನಿಗೆ ತಿಳಿಯುತ್ತದೆ. ಆ ಮುನಿಯು ಬರಲಿ. ವೃಂದಾವನವನ್ನು ನೋಡಿ ಆನಂದದಿಂದ ಈ ಆಖ್ಯಾನ ವ್ಯಾಖ್ಯಾನ ಮಾಡುತ್ತಾನೆ. (ಅವನು ಅಪರೋಕ್ಷಜ್ಞಾನಿ,ಯೋಗಿ ಎಂದು ಭಾವ) ಹದಿನಾರು ಅಧ್ಯಾಯ ವ್ಯಾಖ್ಯಾನಮಾಡಿ ಗೌಡ ದೇಶದವರಿಗೆಲ್ಲಾ ಹಿತ ಮಾಡುತ್ತಾನೆ. ಕರ್ನಾಟಕ, ಉತ್ತರ, ಚೋಲ ಮುಂತಾದ ದೇಶಗಳಲ್ಲೂ ಬಹುವಿಧವ್ಯಾಖ್ಯಾನಯುಕ್ತವಾಗಿ ಇದು ಮೆರೆಯುತ್ತದೆ.'' ''ಆಷಾಢಕ್ಕೆ ಮುಂಚೆ ಹೋಮ ಮಾಡಿದರೆ ಕ್ರತುಕೋಟಿಫಲಪ್ರದಾ. ಹದಿನಾರು ಅಧ್ಯಾಯ ಪಾರಾಯಣಮಾಡಿದರೆ ನನಗೆ ಇಷ್ಟನಾದ ಶಿಷ್ಯನಾಗುತ್ತಾನೆ. ಹನ್ನೆರಡರಿಂದ ಸ್ವರ್ಗದಲ್ಲಿ ಮೆರೆಯುತ್ತಾನೆ. ಎಂಟರಿಂದಲೂ ಅಭೀಷ್ಟಪ್ರಾಪ್ತಿಯಾಗುತ್ತದೆ. ಸೇವಕ, ವೇದವೇದ್ಯರ ಸನ್ನಿಧಿಯಲ್ಲಿ ಕುಳಿತು ನಾಂದೀಪದ್ಯ ಹೇಳಿ ಆರಂಭಿಸಿ ಅಧ್ಯಾಯಮುಗಿದಮೇಲೆ ಇತಿ ಶ್ರೀ ಇತ್ಯಾದಿ ನಾಲ್ಕು ಶ್ಲೋಕಗಳನ್ನೂ ಪ್ರತಿ ಅಧ್ಯಾಯಾಂತ್ಯದಲ್ಲೂ ಹೇಳುತ್ತಾ ಪಾರಾಯಣ ಮುಗಿಸಿ ಅರ್ಪಿಸಬೇಕು. '' ವಿಪ್ರನೇ ! ನಿನ್ನ ವಿಷಯದಲ್ಲಿ ನನಗೂ ಪ್ರಾಣದೇವರಿಗೂ ಸಂವಾದವಾಯಿತು. ''ಆಯುಸ್ಸು ಆಯಿತು. ಒಯ್ಯುತ್ತೇನೆ'' ಎಂದು ಅವರು ಹೇಳಿದರು. ''ನನ್ನ ಪ್ರಚಾರಕಾರ್ಯ ಮುಗಿದಿಲ್ಲ, ಈಗಲೇ ಒಯ್ಯಬೇಡಿ'' ಎಂದು ನಾನು ಹೇಳಿದೆ. ಆಗ ಮಧ್ಯೇ ವಾಮನಸ್ವಾಮಿ ಮಾತನಾಡಿ ''ವಾದಿರಾಜ ಹೇಳಿದಂತೆ ಆಗಲಿ, ಪ್ರಾಣರಾಜ ! ಪ್ರತಿ ಏಕಾದಶಿ ಅವನನ್ನು ಕೇಳು, ನಿಮ್ಮ ಆಖ್ಯಾನ ಮುಗಿಯಿತೇ ? ಎಂದು; ಅವನು ಒಪ್ಪಿದಾಗಲೇ ನೀನು ವಿಪ್ರನನ್ನು ಕರೆದುಕೊಂಡು ಹೋಗು'' ಎಂದನು. ಪ್ರಾಣದೇವರು ಹಾಗೇ ಒಪ್ಪಿದರು. ನೀನು ನನ್ನ ಅಚಿಂತ್ಯಶಕ್ತಿಯನ್ನು ನೆನೆಸಿಕೋ. ಪರೀಕ್ಷಿತನನ್ನು ಶ್ರೀಕೃಷ್ಣ ಉಳಿಸಿದಂತೆ ನಾನು ನಿನ್ನನ್ನು ಉಳಿಸಿದ್ದೇನೆ. ಗುರುಭಕ್ತಿ ಚೆನ್ನಾಗಿ ಮಾಡು. ಮುಂದೆ ಶೇಷನಿಗೆ ಹೇಳಿದ್ದಾರೆ. ''ನಾನು ಯೋಗ್ಯ ಪಾಪಿಗಳನ್ನು ನರಕದಿಂದ ಉದ್ಧಾರಮಾಡಲು ಯಮಲೋಕಕ್ಕೆ ಹೋಗಿದ್ದೆ. ಆಗ ಯಮ

ನಿಮ್ಮನ್ನು ಯಾವ ಮಾನವರು ಋಜುವನ್ನಾಗಿ ತಿಳಿಯದೇ ನಿಂದಿಸುತ್ತಾರೋ ಅವರನ್ನು ನರಕಕ್ಕೆ ಹಾಕದೇ ಬಿಡುವುದೇ ಇಲ್ಲ(35) ಎಂದನು. ಮತ್ತು ಶ್ಲೋಕ(36) 'ವೃಂದಾವನಾಖ್ಯಾನದಲ್ಲಿ ಹೇಳಿದ ಮಹಿಮೆ ನಡೆಯುವುದಿಲ್ಲ' ಎಂದು ಹೇಳುವ ಆತತಾಯಿಗಳನ್ನೂ ಬಿಡುವುದಿಲ್ಲ ಎಂದು ಪ್ರತಿಜ್ಞೆ ಮಾಡಿದನು. ಜನರು ಕೃತಿಯನ್ನು ಪೂಜಿಸಲಿ. ಬ್ರಾಹ್ಮಣನಿಗೆ ಏನಾದರೂ ಭಿಕ್ಷೆಯನ್ನು ನೀಡಲಿ. 'ವಿಪ್ರನೇ! ನೀನು ದುಡ್ಡಿಲ್ಲ-ದಿದ್ದರೆ ನಾಲ್ಕಾರು ಆಖ್ಯಾನಶ್ಲೋಕಗಳನ್ನು ಹೇಳಿಕೊಂಡು ವೃಂದಾವನದ ಸುತ್ತಲೂ ಕುಣಿ. 'ವಿತ್ತಂ ತವ ಭವಿಷ್ಯತಿ' (ನಿನಗೆ ದುಡ್ಡು ಬರುವುದು). ಹಾಗೇ ಕ್ರಮೇಣ ಹದಿನೈದು ಅಧ್ಯಾಯಗಳಿಂದ ನರ್ತನ ಮಾಡಿದರೆ ಭೀಮಸೇನನಿಗೆ ದಿಗ್ವಿಜಯದಲ್ಲಿ ಬಂದಷ್ಟು ಪುಣ್ಯ ಬರುತ್ತದೆ. ಹೇ ಹಯಗ್ರೀವ ಮುನೇ ! ದುಃಸಂಗಬಿಟ್ಟು ಆಖ್ಯಾನ ಪಾರಾಯಣ ಮಾಡು. ವಿಪ್ರನಲ್ಲಿ ಮೈತ್ರಿಹೊಂದು. ಕೃತಿಯ ಮಹಿಮೆಯಲ್ಲಿ ಸಂಶಯ ಬೇಡ. ಯಮನ ಮಾತನ್ನು ಕೇಳು. ಪ್ರತಿಮಲ್ಲರನ್ನು ಖಂಡಿಸು. ಯೋಗಿಯಾಗಿದ್ದಿ ನಿನಗೆ ಭಯವೇನು ? ನಾನು ಪ್ರೀತಿಮಾಡಿದ್ದೇನಾದ್ದರಿಂದ ನನ್ನ ಮಠೀಯರೆಲ್ಲರೂ ನಿನ್ನಲ್ಲಿ ವಿಶ್ವಾಸಮಾಡುತ್ತಾರೆ. ನೀನು ಮಾತ್ರ 'ದೇವರೇ ನನ್ನಲ್ಲಿ ಒಲಿದಿದ್ದಾನೆ. ಈ ಆಖ್ಯಾನ ಪಾರಾಯಣದಿಂದೇನು ? ಎಂದು ಉಪೇಕ್ಷೆ ಮಾಡಬೇಡ. ಅಲ್ಪಪ್ರಯತ್ನದಿಂದ ಮಹಾಲಾಭ ಬಂದರೆ ಏತಕ್ಕೆ ಬಿಡಬೇಕು ?' ''ಹೇ ವಿಟ್ಠಲ ! ಹೇ ವಾದಿರಾಜಭಟ್ಟ! ವಿಪ್ರ ಪೋಷಣೆಯಿಂದ ನಿಮಗೆ ನನ್ನ ಅನುಗ್ರಹದಿಂದ ಅಧಿಕಲಾಭವಾಗುತ್ತೆ, ಬಿಡಬೇಡಿ. ಹೇ ನರಸಿಂಹ ! ಸರಸಭಾರತಿಯನ್ನು ಕಂಠಪಾಠಮಾಡಿರುವಂತೆ ಆಖ್ಯಾನವನ್ನೂ ಬಾಯಿಪಾಠ ಮಾಡು. ಹಯಗ್ರೀವಮುನ್ಯಾದಿಗಳಿಗೆ ಬೋಧಿಸು. ಭೂಪನಿಗೆ ಗ್ರಾಮವನ್ನು ಬ್ರಾಹ್ಮಣರಿಗೆ ಬಿಡುವಂತೆ ಹೇಳು. ಶೇಷಾದ್ರಿಪಂಡಿತ ನಿನ್ನ ದ್ರೋಹದಿಂದ ಕಣ್ಣು ಹಾಳುಮಾಡಿಕೊಂಡಿದ್ದಾನೆ. ನೋಡು, ನಿನ್ನ ಶಿಷ್ಯರೇ ಅವನನ್ನು ನಿಗ್ರಹಿಸಿದ್ದಾರೆ. ದ್ರುಪದನನ್ನು ದ್ರೋಣಶಿಷ್ಯರು ನಿಗ್ರಹಿಸಿದಂತೆ ಆಗಿದೆ. 'ಅನಾಥಂ ತಂ ಸಮುದ್ಧರ' ( ಆ ಅನಾಥನನ್ನು ಉದ್ಧರಿಸು) ಎಂದು ಶೇಷಾದ್ರಿಪಂಡಿತನ ಸ್ವೋತ್ತಮರನ್ನು ಸಂತೈಸಿದ್ದಾರೆ. (ಹಾಗೇ ನಾವೂ ಸ್ವೋತ್ತಮದ್ರೋಹಕಟ್ಟಿಕೊಂಡರೆ, ಗುರುರಾಜರು ನಮಗಾಗಿ ಆ ಸ್ವೋತ್ತಮರನ್ನು ಕ್ಷಮಿಸುವಂತೆ ಪ್ರೇರಿಸುತ್ತಾರೆಂದು ಸೂಚನೆ) ''ಬ್ರಹ್ಮದ್ರೋಹ ಒಳ್ಳೆಯದಲ್ಲ. ವಿನಾಶಕಾಲದಲ್ಲೇ ಅಂತಹ ಬ್ರಾಹ್ಮಣದ್ರೋಹದ ಬುದ್ಧಿ ಬರುತ್ತೆ. ಕಲಿ ಆವೇಶದ ಪ್ರಭಾವ. ಆದರೆ ಆ ಶೇಷಾದ್ರಿ ಸ್ವರೂಪ ಒಳ್ಳೆಯದು. ಕ್ಷಮಿಸು.'' ಎಂದಿದ್ದಾರೆ. ಇನ್ನೂ ನರಸಿಂಹನಿಗೆ ಹೇಳುತ್ತಾರೆ. ''ನರಸಿಂಹ ! ನಿನ್ನ ಪ್ರಭಾವದಿಂದ ವಿಪ್ರ, ಹಯಗ್ರೀವ, ಶೇಷಾದಿ ಜನತೆಗೂ ಕೂಡ ಆಖ್ಯಾನದಲ್ಲಿ ದಾರ್ಢ್ಯ ವೃದ್ಧಿ ಆಗುತ್ತೆ.

ಆ ಕೃತಿ ಋಜುಗಳೇ ಮಾಡಿದ್ದು. ವಿಪ್ರೋಕ್ತಿಯಲ್ಲ. ಇನ್ನಾರಿಗೂ ತಿಳಿದ ವಿಷಯವಲ್ಲ. ಇನ್ನಾರಾದರೂ ಹೀಗೆ ಮಂತ್ರ ಹೇಳಲಾರರು ಎಂದು ಗೊತ್ತಾಗುತ್ತೆ. ನರಸಿಂಹ ! ನಿನ್ನ ಸ್ವಂತ ದುಃಖವನ್ನು ಬಿಡಿಸಿ ಬಿಟ್ಟಿದ್ದೇನೆ. ''ಕಲತ್ರಪುತ್ರಾಣಾಂ ಹರಿಷ್ಯೇಮ್ಲೇಂಛಬಂಧನಂ'' (ಹೆಂಡತಿಮಕ್ಕಳಿಗೆಲ್ಲಾ ತುರಕನಿಂದ ಪ್ರಸಕ್ತ ಕಾರಾಗೃಹಬಂಧ ತಪ್ಪಿಸುತ್ತೇನೆ ಎಂದರ್ಥ. ಅಣ್ಣಯ್ಯಾಚಾರ್ಯರಿಗೆ ಸವಣೂರಿನ ನವಾಬನ ದೆಸೆಯಿಂದ ಇಂತಹ ದುಃಖಪ್ರಸಂಗ ತಪ್ಪಿದೆ.) ''ವಿಪ್ರನೇ ! ತಪ್ಪು ತಪ್ಪು ಬರೆಸಿದ್ದಿ. ನನ್ನ ಕೈಯನ್ನು ನಿನ್ನ ತಲೆಯ ಮೇಲೆ ಇಡುತ್ತೇನೆ. ನಿನ್ನ ಅಜ್ಞಾನವೇ ಹೋಗುತ್ತೆ'' ಎಂದಿದ್ದಾರೆ. ಮುಂದೆ ನರಸಿಂಹನಿಗೆ ಹೇಳುತ್ತಾ ''ಈ ಕೃತಿ ಎರಡು ಸಾವಿರಶ್ಲೋಕಕ್ಕೆ ಮುಗಿಯುತ್ತೆ. ನಂತರ ದೇವರಸೇವೆ ಎಂದರೆ ದೇವರ ಮುಂದೆ ಶಂಖ ಊದುತ್ತಾ ಇರುತ್ತೇನೆ. ಜನರು ಕೃತಿಯನ್ನು ಹೇಗೆ ಉಪಯೋಗಿಸಿಕೊಳ್ಳುತ್ತಾರೆ. ನೋಡುತ್ತೇನೆ.'' ಎಂದಿದ್ದಾರೆ. ಹೇ ಹಯಗ್ರೀವ ಮುನಿ ! ಆಖ್ಯಾನವನ್ನು ಶುಭ ನಕ್ಷತ್ರದಲ್ಲಿ ಆರಂಭಿಸಿ ನೂರು ನೂರು ಶ್ಲೋಕ ಹೇಳಿಸಿಕೋ ! ನನಗೆ ಪುತ್ರತುಲ್ಯನಾದ ವಿಪ್ರನಲ್ಲಿ ಸೌಮ್ಯ ಸ್ನೇಹವನ್ನು ಮಾಡು. ಅವನಿಲ್ಲದಿದ್ದರೆ ಸೋದೆಯಲ್ಲಿ ಯಾವ ಉತ್ಸವವೂ ಶೋಭಿಸುವುದಿಲ್ಲ. ಆ ಯತೀಶ್ವರನೂ ಬರಲಿ ಎಂದು ಕಾಯುತ್ತಿದ್ದೇನೆ. ನೀನೂ ಅವನೂ ಸೇರಿಕೊಂಡು ಸೋದೆಗೆ ಬಂದು ಇಲ್ಲಿ ಎಲ್ಲರಿಂದಲೂ ಆದೃತರಾಗಿ ದೇವರ ಸೇವೆ ಮತ್ತು ನನ್ನ ಸೇವೆಯನ್ನು ಚೆನ್ನಾಗಿ ಮಾಡಿ. ಸಂತರು ನಿಮ್ಮನ್ನು ನೋಡಿ ಸಂತೋಷಿಸಲಿ.'' ''ವಿಪ್ರನೇ ಪುನಃ ವ್ಯತ್ಯಾಸಬರೆಸಿದ್ದೀ. ''ತಸ್ಥಿವಾಂಸಿ'' ಎಂದು ನಾನು ಹೇಳಿದ್ದಕ್ಕೆ ''ತಸ್ಥುಷಾಂಸಿ'' ಎಂದು ಬರೆಸಿದ್ದೀ. ಇದರ ಸೂಚನೆ ಏನು ಗೊತ್ತೇ ? ನನ್ನ ಅಸ್ಥಿಗಳು ಕ್ಲೀಬವಾಗಿ ನನಗೆ ಪುನರ್ಜನ್ಮ ಕೊಡುವುದಿಲ್ಲ ಎಂಬ ಅರ್ಥದಿಂದ ನಾನು ನಪುಂಸಕ ಲಿಂಗ ಶಬ್ದ ಪ್ರಯೋಗಮಾಡಿದ್ದೆ. ನಿಮ್ಮಗಳ ಅಸ್ಥಿಗಳು ಇನ್ನೂ ಪುನಃ ಪುನಃ ನಿಮ್ಮನ್ನು ಹುಟ್ಟಿಸುತ್ತವೆ. ಆದ್ದರಿಂದ ಸಂಸಾರವೃದ್ಧಿಯೇ ಆಗುತ್ತದೆ. ಹೀಗೆ ಅರ್ಥವ್ಯತ್ಯಾಸ ಇದೆ. ಇನ್ನು ಮೇಲೆ ಸರಿಯಾಗಿ ಬರೆಸು. ವಿದ್ವಾಂಸರೇ, ನನ್ನ ಲಿಂಗ,ವಚನ,ಪ್ರತ್ಯಯ ಪ್ರಯೋಗಗಳಲ್ಲಿ ನೀವು ದೋಷ ಹುಡುಕಬೇಡಿ. ನನಗೆ ಅಜ್ಞತಾ ಇಲ್ಲ॥

ಶ್ರೀವಾದಿರಾಜಗುರ್ವಂತರ್ಗತ ಶ್ರೀಮಧ್ವೇಶಾರ್ಪಣಮಸ್ತು

## ಹತ್ತೊಂಭತ್ತನೆಯ ಅಧ್ಯಾಯ ಸಾರಾಂಶ

ಹತ್ತೊಂಭತ್ತನೆಯ ಅಧ್ಯಾಯದಲ್ಲಿ 107 ಶ್ಲೋಕ. 14 ಪ್ರಕರಣಗಳಿವೆ. ವಾದಿರಾಜರು ಪ್ರಸನ್ನರಾಗಿ ಬ್ರಾಹ್ಮಣನಿಗೆ ಹೇಳುತ್ತಾರೆ. ''ಬ್ರಾಹ್ಮಣನೇ ! ನೀನು ಭಿಕ್ಷಾಮಾತುಗಳನ್ನು ಬಿಡು. ಯಾರು ಭಕ್ತಿಯಿಂದ ಕರೆಯುತ್ತಾರೋ ಅವರ ಮನೆಗೆ

ಹೋಗು. ವೃಂದಾವನಸ್ಥ ನನ್ನ ಸೇವೆಯನ್ನು ಬಿಡದೇ ಮಾಡು.'' ನಂತರ ಅಪ್ಪಣ್ಣ ಕೃಷ್ಣಭಟ್ಟರನ್ನು ನಿಂದಿಸುತ್ತಾರೆ. ''ಅಪ್ಪಣ್ಣ ವೃಂದಾವನಾಚಾರ್ಯರ ಅಪಕರ್ಷಕ. ಸುಳ್ಳಿನ ಮನುಷ್ಯ. ಆಖ್ಯಾನ ನಿಂದಕ. ನನ್ನ ತಾಯಿ ಶ್ರಾದ್ಧಕ್ಕೆ ಇವನು ಗರ್ಭಿಣಿ ಪತಿಯಾಗಿದ್ದರೂ ಬ್ರಾಹ್ಮಣಾರ್ಥಕ್ಕೆ ಹೋಗಿದ್ದ. ಕೃಷ್ಣ ದೇವರು ಶ್ರೀವತ್ಸ ಧರಿಸಿದ್ದಾರೆ. ಕೃಷ್ಣಭಟ್ಟ ಇದಕ್ಕೆ ವಿಪರೀತವಾಗಿ ವತ್ಸ ಶ್ರೀಧಾರಕ (ಪಶು ಎಂಥರ್ಥ). ಕೃಷ್ಣ ಕ್ಷೇತ್ರದಲ್ಲಿ ಪಾಪ ಮಾಡಿದರೆ ವಜ್ರಲೇಪವಾಗುತ್ತದೆ. ಈ ಕೃಷ್ಣಭಟ್ಟ ಅಂತಹ ಕೃಷ್ಣಕ್ಷೇತ್ರದ ಪಾಪಿ. ಕೇವಲ ಸ್ವಾರ್ಥ. ಅದಕ್ಕೇ ಅವನು ವಂಶ ಹೀನನಾಗಿದ್ದಾನೆ. ಸಮೂಹಕ್ಕೆ ಪಾಪ ಬಂದರೆ ಸಮೂಹವೇ ಒಟ್ಟಾಗಿ ಹಡಗು ಮುಳುಗಿಯೋ ಅಥವಾ ಯಾನ ಬಿದ್ದೋ ಎಲ್ಲರೂ ಸಾಯುತ್ತಾರೆ. ಈ ಅಪ್ಪಣ್ಣ ಸಮೂಹನಾಯಕ. ನಂತರ ಲಕ್ಷ್ಮೀಪತಿಗೆ ಹೇಳುತ್ತಾರೆ. ಶ್ಲೋಕ 15 (ಅರ್ಥ– ಈ ನನ್ನ ದೈವಿಕ ಗ್ರಂಥವನ್ನು ಯಾವ ದುರ್ಜನರು ಹೃದಯಗ್ರಂಥಿಯುಕ್ತರಾಗಿ ಎಂದರೆ ಕೆಟ್ಟ ಹಟದಿಂದ ವಿಶ್ವಾಸ ಮಾಡುವುದಿಲ್ಲವೋ ಅವರೆಲ್ಲರನ್ನೂ ಯಮಕಿಂಕರರು ಬಂಧಿಸುತ್ತಾರೆ. ಆದರೆ ಆಖ್ಯಾನ ಪ್ರವಚನ ಶೀಲನು ಮತ್ತು ಪಾರಾಯಣ ಮಾಡುವವನು ಯಮಭಟರ ವಶವಾಗುವುದಿಲ್ಲ. ''ಕೋವಾ ಮತ್ಸದೃಶೋ ಯತಿಃ'' (ನನ್ನ ಸದೃಶವಾದ ಯತಿಗಳು ಯಾರಿದ್ದಾರೆ?) ಎಂದಿದ್ದಾರೆ. ''ಹೇ ವೃಂದಾವನ ಸ್ವಾಮಿನ್ ! ನನ್ನ ಭಕ್ತ ವಿಪ್ರನಿಗೆ ಅನ್ನ ನೀಡು. ಮಠ ಸ್ವಾಮಿಗಳ ಮೂಲಕ ಸುಖ ಪಡಿಸು. ಅವನ ದುಷ್ಕರ್ಮ ಬಲವಾಗಿದ್ದರೆ ನಿನ್ನ ಕೋಮಲ ಕೈಯನ್ನು ಅವನ ತಲೆಯ ಮೇಲಿಟ್ಟು ಆಶೀರ್ವದಿಸು. ನಾನು ಶರಣಾಗತನನ್ನು ಬಿಡಲಾರೆ ಎಂದಿದ್ದಾರೆ.

''ಹೇ ಲಕ್ಷ್ಮೀಪತೇ ! ವಿಪ್ರನಿಗೆ ಗೋವನ್ನು ಕೊಡಿಸುತ್ತೇನೆ ಎಂದು ಹೇಳಿ ಏನನ್ನೂ ಕೊಡಿಸಲಿಲ್ಲ. ಸುಳ್ಳು ಹೇಳಬೇಡ. ಹಯಗ್ರೀವ ಆರಾಧನೆ ಮಾಡಿ ಎಲ್ಲಾ ಪಾಪವನ್ನೂ ಕಳೆದುಕೋ'' ''ಶ್ರೀಪತೇ ! ಈ ಹಯಗ್ರೀವ ಮುನಿಗೆ ಆಖ್ಯಾನ ಉಪದೇಶಮಾಡು. ಆತ ಅರ್ಹ.'' ಹೇ ಹಯಗ್ರೀವ ಮುನಿಯೇ ! ವೃಂದಾವನವನ್ನು ನೋಡು. ಆಖ್ಯಾನವನ್ನು ಶ್ರವಣಮಾಡಿ ಪಾರಾಯಣ ಮಾಡು. ''ಕೋಪರಹಿತಶ್ಚೇತ್ ಸಂಪಾವನಂ'' (ಕೋಪವಿಲ್ಲದೆ ಪಠಿಸಿದರೆ ಪಾವನ), ವಿಪ್ರನಿಗೆ ಏನಾದರೂ ಸ್ವಲ್ಪ ಹಿತವನ್ನು ಮಾಡು.'' ಎಂದಿದ್ದಾರೆ. ಇನ್ನು ಮೇಲೆ ಕೃಷ್ಣಾಚಾರ್ಯ ಸಂತ ಶ್ರೀನಿವಾಸನ ವಿಷಯ ಹೇಳುತ್ತಾರೆ. ಆತನೇನೋ ವಿಷ್ಣು ಭಕ್ತ. ಆದರೆ ಆಸೆ ಬಿಟ್ಟಿಲ್ಲ. ಕೋಪ ಹೋಗಿಲ್ಲ. ದೇವರ ಸಂಕಲ್ಪ. ವೈಷ್ಣವರ ನಿಂದೆ ಮಾಡುತ್ತಾನೆ. ಆ ಬ್ರಹ್ಮನಿಂದೆ ತುಂಬಾ ಕೆಟ್ಟದ್ದು. ಈ ಸಂಪೇಸರು ಗ್ರಾಮವನ್ನು ರಾಜನು ಇನ್ನೂ ಬ್ರಾಹ್ಮಣರಿಗೆ ವಾಪಸ್ಸು ಕೊಟ್ಟಿಲ್ಲ. ರಾಜನಿಗೆ ಯಾರು ಹಿತ ಹೇಳುತ್ತಾರೆ. ಸ್ವಾರ್ಥಕ್ಕಾಗಿ ಎಷ್ಟೋಜನ ಬದುಕುತ್ತಾರೆ. ಬ್ರಾಹ್ಮಣರಿಗಾಗಿ

ಬದುಕುವವರೇ ಸಜ್ಜನರು. ಸೀತಾಪತೇ ! ನೀನು ರಾಜನಿಗೆ ಹೇಳಿ ಅದರಿಂದ ಮೇರುವಿನಷ್ಟು ಪುಣ್ಯಗಳಿಸು'' ''ಹೇ ಶ್ರೀಪತೇ ! ಈ ಕೃಷ್ಣಾಚಾರ್ಯಸುತ ಶ್ರೀನಿವಾಸ ಈ ಬ್ರಾಹ್ಮಣರಿಗೆ ಏತಕ್ಕೆ ಜಹಗೀರಿ ? ಎಂದು ಗಟ್ಟಿಯಾಗಿ ಬೈದನು. ಅದನ್ನು ಕೇಳಿ ಎಲ್ಲಾ ಬ್ರಾಹ್ಮಣರೂ, ಯತಿಗಳೂ ಕೂಡ ಬಾಯಿಮುಚ್ಚಿಕೊಂಡು ಸುಮ್ಮನಿದ್ದರು. (ಯಾರೂ ಮುಂದುವರಿಸಿ ರಾಜನಿಗೆ ಹೇಳಲೇ ಇಲ್ಲ, ಇನಾಮತಿ ಬ್ರಾಹ್ಮಣರಿಗೆ ಬರಲೇ ಇಲ್ಲ.) ಈ ಧೂರ್ತ ಶ್ರೀನಿವಾಸ ಬ್ರಾಹ್ಮಣರ ದ್ರೋಹದಿಂದ ಬ್ರಹ್ಮರಾಕ್ಷಸನಾದ. ವೃಂದಾವನಸ್ಥ ಕಾಳೀಯಮರ್ದನ ಕೃಷ್ಣ ಕೃಪೆ ಮಾಡುವವರೆಗೂ ಆ ಬ್ರಹ್ಮರಾಕ್ಷಸ ಜನ್ಮ ಅನುಭವಿಸಬೇಕಾಯಿತು. ವೃಂದಾವನದ ಸಮೀಪದಲ್ಲಿ ಯಾರೋ ಆಖ್ಯಾನ ಪಾರಾಯಣಮಾಡುತ್ತಾ ''ಬಹ್ವೀಃ ಸಮಾಃ ಮಹಾವಹ್ನಿ ಸಂತಪ್ತ ಇವ ತಪ್ಯತೇ'' (ಬಹುವರ್ಷಗಳ ಪರ್ಯಂತ ದೊಡ್ಡ ಬೆಂಕಿಯಲ್ಲಿ ಹಾಕಿ ಸುಡಲ್ಪಟ್ಟವನಂತೆ ತಪಿಸುತ್ತಾನೆ.) ಎಂದು ಪಾರಾಯಣ ಮಾಡಿದ್ದನ್ನು ಶ್ರವಣಮಾಡಿದಾಗ ಆ ಕೆಟ್ಟ ಜನ್ಮ ನೀಗಿದ. ಆಗ ನಾನು ಸರ್ಪಕವಚ ಧರಿಸಿದ್ದೆ. ಆ ಪಾಪವನ್ನು ಸುಟ್ಟು ಅವನನ್ನು ಕಾಪಾಡಿದೆ'' ಎಂದಿದ್ದಾರೆ. ಹೀಗೆ ಕೃಷ್ಣಾಚಾರ್ಯಪುತ್ರ ಶ್ರೀನಿವಾಸನ ಉದ್ಧಾರ ರೀತಿ ಹೇಳಿ ಮುಂದೆ ಚಿಂತಾಮಣಿ ಆಚಾರ್ಯರ ಪುತ್ರ ಲಕ್ಷ್ಮೀನಾರಾಯಣನ ದೌರ್ಜನ್ಯ ವಿವರಿಸುತ್ತಾರೆ. ಈ ದುಷ್ಟನು ''ಕೃತಿ ವಿಪ್ರನದೇ ಎಂದು ನಾನು ಪ್ರಮಾಣ ಮಾಡುತ್ತೇನೆ'' ಎನ್ನುತ್ತಾನೆ. ಹಾಗೆ ಮಾಡಿದರೆ ಅವನು ಏಳು ದಿನಕ್ಕೆ ಸಾಯುತ್ತಾನೆ. ಗುರುರಾಜ ಭಕ್ತ ಶೇಷನು ವೃಂದಾವನದ ಸನ್ನಿಧಾನದಲ್ಲಿ ಸುಳ್ಳುಹೇಳಿದರೆ ಅನರ್ಥ ತಪ್ಪುವುದಿಲ್ಲವೆಂದು ತಿಳಿದು, ಆ ಚಿಂತಾಮಣಿ ಆಚಾರ್ಯರ ಪುತ್ರವನ್ನು ಮೂದಲಿಸಿ ಹೊರಕ್ಕೆ ಕರೆದು ''ನೀನು ವೃಂದಾವನದ ಮುಂದೆ ಕೃತಿ ವಿಪ್ರನದೇ ಎಂದು ಪ್ರಮಾಣ ಮಾಡು; ಕೃತಿ ವಾದಿರಾಜರದ್ದೇ ಎಂದು ನಾನು ಪ್ರಮಾಣ ಮಾಡುತ್ತೇನೆ. ಸುಳ್ಳು ಹೇಳಿದವರು ಸತ್ತುಹೋಗಲಿ ಒಪ್ಪುತ್ತೀಯೋ?'' ಎಂದು ಜೋರಿನಿಂದ ಕೇಳಿದನು. ಆದರೆ ಶೇಷನ ಕಾರ್ಯಕ್ಕೆ ಗುರುರಾಜರು ಸಂತೋಷ ಪಡಲಿಲ್ಲ. ''ಶೇಷ ! ಪ್ರಮಾಣ ಮಾಡು ಎಂದು ಬಲವಂತಮಾಡಿ ಆ ಪಾಪಿಯನ್ನು ಹಾಗೆ ಮಾಡಿಸಿ ಅವನನ್ನು ಕೊಂದರೆ ನನಗೆ ಅಪ್ರೀತಿಯಾಗುತ್ತೆ. ಅವನು ಎಷ್ಟು ಪಾಪಿಯಾದರೂ ನನ್ನ ಭಕ್ತ, ಅವನನ್ನು ಕೊಲ್ಲಲು ನಾನು ಒಪ್ಪುವುದಿಲ್ಲ.'' ಎಂದು ಹೇಳಿ, ಶೇಷನಿಗೆ ''ಸುಮ್ಮನಿರು'' ಎನ್ನುತ್ತಾರೆ. ಆ ಚಿಂತಾಮಣಿ ಆಚಾರ್ಯಪುತ್ರನನ್ನು ತಿದ್ದಬೇಕೆಂದು ತಾವೇ ಭಯಜನಕ ಮಾತಾಡುತ್ತಾರೆ. ಅವನನ್ನು ಶಪಿಸಲಿಲ್ಲ. ''ಕಲಿಯುಗ, ಭಕ್ತರು ಅಪರಾಧಮಾಡಿದರೆ ಸಹಿಸಬೇಕು. ದುರಾವೇಶದಿಂದ ಮಲೀಮಸರಾಗುತ್ತಾರೆ. ಸ್ವಭಾವ ದೌರ್ಜನ್ಯವಿಲ್ಲದೇ

ಆವೇಶದಿಂದ ಅನ್ಯಾಯ ಮಾಡಿದರೆ ಸಾಧುಗಳು ತಾಳಬೇಕು. ಆದರೆ ಅವರ ದಾನಾದಿಗಳನ್ನು ತಿರಸ್ಕರಿಸಬಹುದು. ಸರ್ವದಾ ಅವಿಶ್ವಾಸಮಾಡುವ ಮಲೀಮಸರು ತಮ್ಮ ಪಾಪದಿಂದಲೇ ಭಸ್ಮೀಭೂತರಾಗಿ ಹಾಳಾಗುತ್ತಾರೆ. ಯಮನು ನರಕಕ್ಕೆ ಹಾಕುತ್ತಾನೆ. ನಿಷ್ಕಲಂಕರಿಗೆ ಏನೂ ಆಗುವುದಿಲ್ಲ. ಈ ಲಕ್ಷ್ಮೀನಾರಾಯಣ ಈಗ ದುಷ್ಟನೇ. ಆತ ಇತರರಿಗೆ ವೃಂದಾವನದ ಮಹಿಮೆಯಲ್ಲಿ ಸಂಶಯ ತುಂಬಿಸುತ್ತಾನೆ. ಬೇರೆ ಒಬ್ಬ ದುಷ್ಟ ಅವನ ಹೆಸರೂ ಲಕ್ಷ್ಮೀನಾರಾಯಣ. ಅವನು ಲಕ್ಷ್ಮೀಪತಿ ಮನೆಗೆ ಲಕ್ಷ್ಮೀಪೂಜೆದಿವಸ ಹೋಗಿದ್ದಾಗ ಅಲ್ಲಿ ವೃಂದಾವನಾಖ್ಯಾನದ ನಿಂದಾ ಮಾಡಿದ. ಆಗಲೇ ತಲೆ ತಿರುಗಿ ಮೂರ್ಛೆ ಬಿದ್ದ. ಈ ಚಿಂತಾಮಣಿ ಆಚಾರ್ಯ ಪುತ್ರನೂ ಪಾಪಾಧಿಕ್ಯವನ್ನು ಹೊಂದುತ್ತಾನೆ. ಇವನನ್ನು ಚೆನ್ನಾಗಿ ಬೈಯಿ ಎಂದು ಲಕ್ಷ್ಮೀಪತಿಗೆ ಆಜ್ಞೆಮಾಡಿದ್ದಾರೆ. ''ನಾನು ವೃಂದಾವನವು ಭೂಮಿಯಲ್ಲಿರುವವರೆಗೂ ಇರಬೇಕು. ಇವನ ನಿಂದೋಕ್ತಿಯಿಂದ ಇತರರು ಕೆಡುತ್ತಾರೆ. ಹೇ ಹಯಗ್ರೀವದೇವ ! ಇವನ ನಾಲಿಗೆ ಕಠೋರವಾಗಿದೆ. ನನಗೆ ಕೆಟ್ಟ ಹೆಸರು ಬೇಡ. ಕ್ಷಮಾಸಾಗರನಾದ ನೀನೇ ಇವನನ್ನು ಸರಿಮಾಡು'' ಎಂದು ಬೇಡಿದ್ದಾರೆ. ''ನಾನು ಶಾಪಕೊಟ್ಟು ತಪೋಹಾನಿ ಮಾಡಿಕೊಳ್ಳುವುದಿಲ್ಲ. ಆನಂದತೀರ್ಥರನ್ನು ಬೈದರೇನೆ ನಾನು ಶಾಪಕೊಡುವುದು. ಈಗ ಕೌಸ್ತುಭಧಾರಿ ಲಕ್ಷ್ಮೀನಾರಾಯಣ ದೇವರನ್ನೇ ಬೇಡುತ್ತೇನೆ.'' ಎಂದಿದ್ದಾರೆ. ಆ ಸ್ವಾಮಿ ಕ್ಷಮಾಸಾಗರ. ಭೂದೇವಿ ಕ್ಷಮಾಪರಳು. ಕ್ಷಮೆಯಿಂದ ಸರ್ವತಪಃಪ್ರಾಪ್ತಿ ಇದೆ. ದ್ರೌಪದೀದೇವಿ ಕ್ಷಮಿಸಿದಳು. ಭೀಮಸೇನ ಕ್ಷಮಿಸಿದ್ದಾನೆ. ಅರ್ಜುನಾದಿಗಳೂ ಕ್ಷಮಿಸಿದ್ದಾರೆ. ದಾಶರಥಿರಾಮದೇವ ಕ್ಷಮಾ ಮಹಿಮೆ ತೋರಿಸಿದ್ದಾನೆ. ಶೇಷ ! ನೀನೂ ಕ್ಷಮೆಯನ್ನು ಅವಲಂಬಿಸು. ಚಿಂತಾಮಣಿ ಆಚಾರ್ಯಪುತ್ರನನ್ನು ಕೊಲ್ಲಬೇಡ. ದೊಡ್ಡವರೆಲ್ಲಾ ಕ್ಷಮಾವಂತರು. ನಮಸ್ಕಾರಮಾಡಿದರೆ ಕೋಪವನ್ನೇ ಬಿಟ್ಟುಬಿಡುವರು. ಆ ನಿಃಶ್ರೀನಿವಾಸನಿಗೆ ಈ ಕ್ಷಮಾ ಇಲ್ಲ. ಅವನು ಊರಿಂದೂರಿಗೆ ಓಡುತ್ತಾ ಭಟರಿಂದ ಬಾಧಿಸಲ್ಪಡುತ್ತಾನೆ. ಅವನಿಗೆ ಎಲ್ಲೂ ಮಾನವಿಲ್ಲ. ಕಲಿಪ್ರೇರಣೆಯಿಂದ ಬುದ್ಧಿಕೆಟ್ಟ ಯೋಗ್ಯರ ವಿಷಯದಲ್ಲಿ ಕ್ಷಮಾ ತಾಳಿದರೆ ತಪೋವೃದ್ಧಿ ಆಗುತ್ತೆ. ದೇವರು ನಮ್ಮನ್ನು ರಕ್ಷಿಸುತ್ತಾನೆ'' ಎಂದಿದ್ದಾರೆ. ಈ ಅಧ್ಯಾಯದಲ್ಲಿ ಬುದ್ಧಿ ಕೆಟ್ಟವರಿಗೆ ಶಿಕ್ಷಣಕೊಡುವ ನಿದರ್ಶನಗಳಿವೆ.

ಶ್ರೀವಾದಿರಾಜಗುರ್ವಂತರ್ಗತ ಶ್ರೀಮಧ್ವೇಶಾರ್ಪಣಮಸ್ತು

## ಇಪ್ಪತ್ತನೆಯ ಅಧ್ಯಾಯದ ಸಾರಾಂಶ

ಇಪ್ಪತ್ತನೆಯ ಅಧ್ಯಾಯದಲ್ಲಿ 99 ಶ್ಲೋಕ. 15 ಪ್ರಕರಣಗಳಿವೆ. ಲಕ್ಷ್ಮೀಪತಿಗೆ

ಹೇಳುತ್ತಾರೆ. ''ಈ ಹಯಗ್ರೀವ ಮುನಿಯ ಇಬ್ಬರು ಶಿಷ್ಯರು ಒಳ್ಳೆಯವರು. ಆದರೂ ಉಗ್ರಭಾಷಿಗಳು. ಲಕ್ಷ್ಮೀಪತಿ ಎಂದು ಒಬ್ಬನ ಹೆಸರು. ಇನ್ನೊಬ್ಬನು ಸದಾನಂದ ನಾಮಕ. ಅವರ ಕ್ರೌರ್ಯ ಅವರ ಜ್ಞಾನನಾಶಕ್ಕೆ ಕಾರಣ. ಆ ಶೇಷಾದ್ರಿಪಂಡಿತನಿಗೆ ಈ ಐದು ಪದ್ಯಗಳನ್ನು ಹೇಳು. (ಅರ್ಥ— ಹೇಳಿದಂತೆ ಮಾಸಿಕ ಪ್ರತಾಪವನ್ನು ವಿಪ್ರನಿಗೆ ಕೊಡಲಿಲ್ಲ. ಅನೃತ ನೃಸಿಂಹನಿಗೆ ಅಪ್ರಿಯ. ನೃಗರಾಜನಿಗೆ ಆದಂತೆ ಹೀನಜನ್ಮದಾಯಕ. ನಾನು ಹೇಳಿದ ಮೇಲೆ ಒಂದೇ ಮಾತು ಎಂಬ ನಿನ್ನ ಜಂಭ ಎಲ್ಲಿ ಹೋಯಿತು ? ಆಖ್ಯಾನದಲ್ಲಿ ಸಂದೇಹ ಬಿಡು. ಪ್ರಾಣ ಇರುವವರಿಗೂ ಬ್ರಾಹ್ಮಣನಿಗೆ ಕೊಟ್ಟೇ ಕೊಡುತ್ತೇನೆಂದು ಹೇಳಿದ್ದನ್ನು ಸತ್ಯಮಾಡು'') ಎಂದು ಪದ್ಯ ಹೇಳಿದ್ದಾರೆ. ಆದರೆ ಶೇಷಾದ್ರಿಯೇ ಕಾಣಿಸಿಕೊಂಡಾಗ ಅವನ ಭಯವನ್ನು ನೋಡಿ ಅಭಯ ಕೊಡುತ್ತಾರೆ. ''ನೀನು ಭಯಪಡಬೇಡ. ನಿನಗೆ ಭಾಗ್ಯವೃದ್ಧಿ ಮಾಡುತ್ತೇನೆ. ನೀನು ನನ್ನನ್ನು ಇಲ್ಲೇ ಶನಿವಾರ ಸೇವಿಸು. ವಿಪ್ರನಿಗೆ ನೀನು ಭಾಷೆ ಮಾಡಿದ್ದನ್ನು ಕೊಡು. ನನ್ನ ಪ್ರಸಾದದಿಂದ ನಿನಗೆ ಶ್ರೇಯಸ್ಸಾಗುತ್ತೆ.'' ಹೀಗೆ ಶೇಷಾದ್ರಿಗೆ ನಿದರ್ಶನ. ನಂತರ ಹಯಗ್ರೀವಮುನಿಗೆ ಹೇಳುತ್ತಾರೆ. ''ನಾನು ವಿಪ್ರನನ್ನು ಜೀವಿತನನ್ನಾಗಿ ಮಾಡಿದ್ದೇನೆ. ನಿನ್ನ ಆಗಮನ ಸಂತೋಷಕರ. ಶ್ರೀನಿವಾಸ ಚತುರ್ಮುಖರು ಪರಸ್ಪರ ದರ್ಶನ ಮಾಡಿದಂತಾಯಿತು. ಹೀಗೆ ಪ್ರೀತಿವೃದ್ಧಿ ಆಗಲಿ. ನಿನ್ನನ್ನು ನನ್ನ ಧ್ಯಾನಚಿತ್ತದಲ್ಲಿ ಕರೆದಿದ್ದೆ. ನೀನು ಬಂದೆ, ಇನ್ನು ವಿಪ್ರನ ಸಂಗಡ ಸೇರಿಕೊಂಡು ರಥೋತ್ಸವ ಮಾಡು. ನಿನ್ನ ದೇಹರಥದಲ್ಲಿಯೂ ಕಾಮಾದಿಗಳನ್ನು ಜಯಿಸು ಎಂದು 23ರಿಂದ26ರವರೆಗೆ ಶ್ಲೋಕಗಳಿವೆ. (ನೀನೇ ರಥಿಕ, ಸುಗ್ರೀವನು ರಾವಣಾದಿಗಳನ್ನು ಗೆದ್ದಂತೆ ನೀನು ಕಾಮಾದಿಗಳನ್ನು ಗೆಲ್ಲು, ವೈರಾಗ್ಯ ಪೂರ್ವಕ ಜ್ಞಾನವೆಂಬ ಬಾಣವನ್ನು ಬಿಟ್ಟು ಮೊದಲು ಕಾಲನೇಮಿಗ್ರಸ್ತಕಾಮಶತ್ರುವನ್ನು ಗೆಲ್ಲು. ನಂತರ ಮದ ಮತ್ಸರ ಮೋಹಗಳನ್ನೂ, ಕ್ರೋಧ ಲೋಭಗಳನ್ನೂ, ವೈರಾಗ್ಯ ಧನುಸ್ಸಿನಿಂದಲೇ ಕೊಂದುಬಿಡು. ಈ ಶ್ಲೋಕಪಠನದಿಂದ ಶಕ್ತಿಬರುತ್ತೆ) ಕೃತಿಯ ಮೇಲೆ ನಿನ್ನ ದೃಷ್ಟಿಬೀರು. ದೇವತೆಗಳೂ ಇದನ್ನು ಒಯ್ಯುತ್ತಾರೆ. ಈ ಅಮೌಲ್ಯ ಗ್ರಂಥದಲ್ಲಿ ಅಪ್ರಾಮಾಣ್ಯ ಶಂಕೆ ಮಾಡುವವರಿಗೆ ತಪ್ತಪಾಷಾಣಾದಿ ಮೂರು ನರಕಯಾತನೆಗಳನ್ನು ಯಮ ವಿಧಿಸಿದ್ದಾನೆ. ಆದ್ದರಿಂದ ನೀನೂ ಆಖ್ಯಾನ ಪಾರಾಯಣ ಸ್ವಲ್ಪ ಇಟ್ಟುಕೋ. ನರಸಿಂಹಯತಿಗಳ ಪ್ರಸಾದವನ್ನು ಸಂಪಾದಿಸು''. ನಂತರ ಲಕ್ಷ್ಮೀನಾರಾಯಣನಿಗೆ ಹೇಳುತ್ತಾರೆ. ''ಎಲೈ ಅಯೋಗ್ಯನೇ ! ಅಮಂಗಳ ದಿವಸಕ್ಕೆ ಮಂಗಳವಾರ ಎಂದು ಹೆಸರಿಟ್ಟಂತೆ. ಅಲಕ್ಷ್ಮೀಕನಾದ ನಿನಗೆ ಲಕ್ಷ್ಮೀನಾರಾಯಣ ಎಂದು ಹೆಸರಾಗಿದೆ. ಪ್ರಮಾಣ ಮಾಡುತ್ತೇನೆಂಬ ಶಪಥದಿಂದ ನರಕಕ್ಕೆ ಬೀಳುತ್ತೀ, ಕೂಡಲೇ ಶರಣು

ಹೊಂದು. ನಿನ್ನ ಕಟ್ಟ ಮಾತು ನನಗೆ ಬಾಣತುಲ್ಯ. ನೀನಾದರೋ ಇಂತಹ ಅನ್ಯಾಯ ಮಾಡಿದ್ದೇನೆಂದು ತಿಳಿಯದ ಕಲ್ಲು.'' ಎಂದು ಭಯಪ್ರದರ್ಶನಮಾಡಿದ್ದಾರೆ. ನಂತರ ಶೇಷಾದ್ರಿಗೆ ಅಹಂಕಾರ ಮಟ್ಟುಮಾಡಲು ಹೇಳುತ್ತಾರೆ. ''ಜಗತ್ತಿನಲ್ಲಿ ನನ್ನ ಸಮಾನ ಪಂಡಿತರೇ ಇಲ್ಲ ಎಂದು ಗರ್ವದಿಂದ ತುಂಬಿದ್ದಿ. ಕೇವಲ ಬುದ್ಧಿವಂತಿಕೆ ಮಾತನಾಡು-ವುದರಲ್ಲಿ ನೀನು ಮೇಲು. ಅಭೀಷ್ಟಪ್ರದ ವೃಂದಾವನಸ್ಥರಲ್ಲಿ ವಾದಿರಾಜರು ಮೇಲು. ಸಾಯುವ ಬ್ರಾಹ್ಮಣನನ್ನೂ ಅವರು ಬದುಕಿಸಿದ್ದಾರೆಂದು ತಿಳಿ. ನೀನು ನಿನ್ನ ಜಾತಿಯ ಅಜ್ಞಜನರಿಂದ ಹೊಗಳಲ್ಪಟ್ಟಿದ್ದಿ.'' ಅನಂತರ ವಿಪ್ರನಿಗೆ ಹಿತೋಕ್ತಿ''ನಿನ್ನ ದೌರ್ಭಾಗ್ಯತನ ಹೆಚ್ಚಾಯಿತು. ಅನ್ನವಿಲ್ಲ ನಿನಗೆ. ನಾನು ಕೆಲವು ದಿನ ಬರುವುದಿಲ್ಲ. ವೃಂದಾವನಸ್ಥ ಹಯಗ್ರೀವದೇವರೇ ಅನ್ನ ಒದಗಿಸುತ್ತಾನೆ. ನೀನು ಆಖ್ಯಾನ ಪಠಿಸು. ಭಾರತವ-ನ್ನಾದರೂ ಪಠಿಸು.'' ''ಹೇ ಶ್ರೀಪತಿ ! ವಿಪ್ರನಿಂದ ಭಾರತಸೇವೆ, ಆಖ್ಯಾನ ಪಾರಾಯಣ ಮಾಡಿಸಿ ವಿಪ್ರನಿಗೆ ಏನೂ ಬಹುಮಾನ ಮಾಡಬೇಡವೇ? ನಿನ್ನ ದೇಹವನ್ನು ನಾನು ಬಿಟ್ಟುಬಿಟ್ಟರೆ ನೀನು ಮೃತನಾಗುತ್ತಿ. ಗೊತ್ತೇ?'' ಎಂದಿದ್ದಾರೆ. ದಾಂಬಳಗ್ರಾಮಸ್ಥ ಪಿತ್ತಮೌಲಿ ನಾರಾಯಣನಿಗೆ ''ಹೇ ಗುಣಾಧಮ! ತಿರುಗಿ ಜಗಳಕ್ಕೆ ಕಾಲು ಕೆರೆಯುತ್ತಿದ್ದಿ. ಧಿಕ್ಕಾರ ನಿನ್ನ ಹುಡುಗಬುದ್ಧಿಗೆ. ಈ ಕನಕಾ ಕೃಷ್ಣಭಟ್ಟನು ದುಡ್ಡಿನಲ್ಲೇ ಮನಸ್ಸುಳ್ಳವ-ನಾದರೂ ಸ್ವಲ್ಪ ಆಖ್ಯಾನ ಪಾರಾಯಣಮಾಡಿ ಅಭೀಷ್ಟವನ್ನು ಹೊಂದುತ್ತಾನೆ. ನಿನಗೆ ಅಷ್ಟು ಯೋಗ್ಯತೆಯೂ ಇಲ್ಲ.'' ಎಂದು ನಿಂದಾನಿದರ್ಶನ ತೋರಿಸಿದ್ದಾರೆ. ''ಹೇ ವಿಟ್ಠಲ! ಶೇಷಾದ್ರಿಪಂಡಿತ ಅನೃತವನ್ನು ಬಿಡಲೇ ಇಲ್ಲ. ಅನೃತಕ್ಕಿಂತ ಹೆಚ್ಚಿನ ಪಾಪ ಯಾವುದು? ಅಂತಹವನ ಅಭೀಷ್ಟ ಹೇಗೆ ಪ್ರಾಪ್ತವಾಗುತ್ತೆ?'' ಎಂದು ವಿಟ್ಠಲನೂ ಸುಳ್ಳಾಡಿರಬಹುದೆಂದು ಸೂಚನೆ ಮಾಡಿ ಮುಂದೆ ಹೇಳುತ್ತಾರೆ. ''ನಾನು ನಿನ್ನ ಸಂಗಡ ಜಗಳಕ್ಕೆ ನಿಂತಿಲ್ಲ. ನಿನ್ನ ಸುಳ್ಳು ನಿನ್ನನ್ನೇ ತಿನ್ನುತ್ತದೆ. ಹಾಗಿಲ್ಲ ನಾನು ಯೋಗ್ಯ ನಿಮ್ಮನ್ನೇ ನಂಬಿದ್ದೇನೆ ಎಂದು ನೀನು ಹೇಳುವ ಪಕ್ಷಕ್ಕೆ ನಿನಗೆ ಹಗಲೋ, ರಾತ್ರಿಯೋ ಸ್ವಪ್ನದಲ್ಲೋ ಜಾಗ್ರದ್ದೆಶೆಯಲ್ಲಿಯೋ ಕೃತಿಯು ವಾದಿರಾಜರೇ ಮಾಡಿದ್ದು ಎಂದು ನೀನು ನಂಬುವಂತೆ ನಿದರ್ಶನ ತೋರಿಸುತ್ತೇನೆ. ಆದ್ದರಿಂದ ನಿನಗೆ ಭಕ್ತಿವೃದ್ಧಿ ಸಹ ಆಗುತ್ತೆ'' ಎಂದಿದ್ದಾರೆ. ನಂತರ ಲಕ್ಷ್ಮೀಪತಿಗೆ ಹೇಳುತ್ತಾರೆ. ''ಲಕ್ಷ್ಮೀಪತೇ! ಮನೆ ಇಲ್ಲ ಎಂದು ಪೇಚಾಡಬೇಡ. ನಿನ್ನ ದೇಹದಲ್ಲಿ ನಾನೇ ನಿನಗೆ ಆಶ್ರಯಕೊಟ್ಟು ವಾಸ ಮಾಡಿದ್ದೇನೆ. ನಾನೇ ಮನೆ ಎಂದು ತಿಳಿ. ಸ್ವಲ್ಪದಿನದಲ್ಲಿ ನಾನು ಕೃತಿಯನ್ನು ಮುಗಿಸಿ ಹಿಮಕೋಕಿಲದಂತೆ ಮೌನಧರಿಸಿ ದೇವರ ಮುಂದೆ ಶಂಖಸೇವೆ ಮಾಡುತ್ತೇನೆ. ನಾರದರಿಗೆ ನನ್ನ ಶಂಖಧ್ವನಿ ಕೇಳಿ ಆಶ್ಚರ್ಯವಾಗುತ್ತದೆ.'' ''ಶೇಷಾದ್ರಿ ! ಸುಳ್ಳು ತ್ಯಜಿಸು.

ಹೇ ಹಯಗ್ರೀವಮುನೇ ! ಗ್ರಹಣ ಹಿಡಿಯಿತು. ನಿನ್ನ ಅನುಷ್ಠಾನ ಹೆದರದೆ ಮಾಡು. ಸೀತಾಪತೇ ! ನೀನೂ ಈ ಗ್ರಹಣಕಾಲದಲ್ಲಿ ರಾಮನಿಗಾಗಿ ದಾನಮಾಡು; ನೀನು ಸುಳ್ಳು ಪ್ರತಿಜ್ಞೆಯವನಲ್ಲ, ನಿನಗೆ ದಾನಫಲ ಬೇಗ ಬರುತ್ತೆ. ಗ್ರಹಣಕಾಲದಲ್ಲಿ, ನಾನು ಬದುಕಿದ್ದಾಗ, ಸುವರ್ಣದಾನ ನೆಂಟರಿಂದ ಮಾಡಿಸಿದ್ದೆ. ಕುಲೋದ್ಧಾರ ಆಯಿತು.'' ಇನ್ನೊಂದು ನಿದರ್ಶನ ''ಯಾರೋ ವೃಂದಾವನಾಚಾರ್ಯರ ಜಮೀನನ್ನು ಆಕ್ರಮಿಸು-ತ್ತಿದ್ದಾರೆ. ಅವನು ವೃಂದಾವನದ್ರೋಹಿಯಾಗಿ ಅಶುಭಹೊಂದುತ್ತಾನೆ. ನಾನು ಸಜ್ಜನೋದ್ಧಾರಕ್ಕಾಗಿ ದೇವರಕಾರುಣ್ಯಪ್ರವಾಹ ಹರಿಯಲೆಂದು ಶ್ರೀಹಯಗ್ರೀವನನ್ನು ಸ್ತುತಿಸುತ್ತೇನೆ. ನನ್ನ ಸದ್ಭಕ್ತಿ ಸಂಭೂತಿಯನ್ನು ವಿಪ್ರ ಹೇಳಿದವಾಕ್ಯಗಳಿಂದ ತಿಳಿದು ಈ ವಾದಿರಾಜರು ಋಜುಗಳು, ಭಕ್ತಿಪೂರ್ಣರು, ನಮ್ಮನ್ನು ಉದ್ಧರಿಸುತ್ತಾರೆಂದು ನಂಬಿ ಸೇವಿಸಿದವರಿಗೆ ಸಂಪದಭಿಮಾನಿಗಳು. ಒಲಿದು ಸುಖಪಡಿಸುತ್ತಾರೆ. ಎಂದು ಹೇಳುತ್ತಾರೆ. ''ಬಾಳೆಹಣ್ಣೂ ಒಂಟೆಗೆ ಆಗುವುದಿಲ್ಲ, ನನ್ನ ಸ್ವರೂಪ ಜ್ಞಾನಪೂರ್ವಕ-ವಾದ ಸ್ತುತಿಹೀನನು ಎಂಟುವಿಧ ಘೋರನರಕ ಕಷ್ಟಹೊಂದುತ್ತಾನೆ. ಆದ್ದರಿಂದ ಶಿಷ್ಟರು ನನ್ನ ಕೃತಿಪಾರಾಯಣ ಮಾಡಿ ಭಕ್ತಿಮಾಡಲಿ. ಅವರಿಗೆ ಇಷ್ಟಪ್ರಾಪ್ತಿ ಆಗುತ್ತೆ, ಇಲ್ಲೂ ಅಲ್ಲೂ ಎಲ್ಲೂ ಕಷ್ಟವಾಗುವುದಿಲ್ಲ(86). ಯಾವ ಪುಣ್ಯಹೀನನು ನನ್ನನ್ನು ಮಿಥ್ಯಾವಾದಿ ಎಂದು ತಿಳಿಯುತ್ತಾನೆಯೋ ಅವನು ನರಕಕ್ಕೆ ಹೋಗುತ್ತಾನೆ. ಆದ್ದರಿಂದ ಇದೆಲ್ಲಾ ಸತ್ಯವೇ, ಸಂಸಾರ ತಾರಕವೇ. ಸ್ವಾಪ್ನ ಶ್ಲೋಕೋಕ್ತವಾದರೂ ಫಲಿಸುತ್ತದೆ. ಸರ್ವಾರ್ಥದಾಯಕ. ಹೇ ವಾಸುದೇವಮುನೇ ! ನೀನು ಶ್ರೀನಿವಾಸಭಕ್ತಿ ಮಾಡ-ಬೇಕೆಂದಿದ್ದಿ. ಮಾಡು, ನನ್ನ ವೃಂದಾವನದಲ್ಲಿ ವೇಂಕಟೇಶ ಬಂದಿದ್ದಾನೆ. ತ್ರಿಕೂಟೇಶ, ಕಾಠಕಸಿದ್ಧರೂ ಸಹ ಬಂದಿದ್ದಾರೆ. ಆದ್ದರಿಂದ ನೀನು ಇಲ್ಲಿಯೇ ಶನಿವಾರ ಶ್ರೀನಿವಾಸನ ಪೂಜೆ ಮಾಡು. ನಿನ್ನ ಮಾಧವೀ ವೃತ್ತಿಯನ್ನು ಮಾಡು. ಬಿಂದುಮಾಧವನೂ ಬಂದಿದ್ದಾನೆ. ಆದ್ದರಿಂದ ಕಾಶಿಯೂ ಇದೇ. ಬಿಂದುಮಾಧವನ ದರ್ಶನದ ಪುಣ್ಯವು ಇಲ್ಲೇ ಬರುತ್ತದೆ.'' ಹೀಗೆ ಅಧ್ಯಾಯವು ನಿದರ್ಶನ ಪೂರ್ಣವಾಗಿದೆ. ||ಮಧ್ವೇಶಾರ್ಪಣಮಸ್ತು||

## ಇಪ್ಪತ್ತೊಂದನೆಯ ಅಧ್ಯಾಯ ಸಾರಾಂಶ

ಇಪ್ಪತ್ತೊಂದನೆಯ ಅಧ್ಯಾಯದಲ್ಲಿ 109 ಶ್ಲೋಕ. 18 ಪ್ರಕರಣಗಳು ಇವೆ. ಆರಂಭದಲ್ಲಿ ವಿಪ್ರನಿಗೆ ಹೇಳುತ್ತಾ ''ನಿನ್ನ ಮರಣ ತಪ್ಪಿಸಿ ಆಯುಸ್ಸು ಕೊಟ್ಟಿದ್ದೇನೆ. ನಿನ್ನ ಪತ್ನೀಪ್ರಾರ್ಥನೆಯೂ ಕಾರಣ. ನೀನು ಧರ್ಮಪತ್ನಿಯನ್ನು ಸಂಕಟಪಡಿಸಬೇಡ. ಸೂತಿಕಾವಾಯು ರೋಗದಿಂದ ಕೆಲವು ವೇಳೆ ನಿನ್ನಸೇವೆಗೆ ಅವಳು ಅಸಮರ್ಥಳು.

ಅವಳ ಭಾವವನ್ನು ವಿಪರೀತ ತಿಳಿಯಬೇಡ.'' ಎಂದಿದ್ದಾರೆ. ಹಾಗೆ ಶೇಷನಿಗೂ ''ನಿಷ್ಠುರ ಮಾತನ್ನೂ ಕಲಹವನ್ನೂ ತ್ಯಜಿಸು'' ಎಂದಿದ್ದಾರೆ. ಆಮೇಲೆ ಬಹುಜನ ವಿದ್ವಾಂಸರಿಗೆ ಹೇಳುತ್ತಾರೆ. ''ಈ ಕಮಲನಾಭ ಮಧ್ವಾಚಾರ್ಯರ ಸಿದ್ಧಾಂತಪದ್ಧತಿಯನ್ನು ಬಿಟ್ಟು ಮಣಿಮಂತನ ಮತವನ್ನು ಅವಲಂಬಿಸಿದ್ದಾನೆ. ವಾಯುವಿರಿಂಚರು ನನಗೆ ತಮ್ಮ ಸರ್ವಾಧಿಕಾರವನ್ನು ಕೊಟ್ಟು ನಾನು ಋಜು ಎಂದು ಸೂಚಿಸಿದ್ದರೂ ಇವನು, ಇವನ ಪತ್ನೀ, ಇವನ ಸ್ನೇಹಿತರೂ ಸಹ ನಂಬುವುದಿಲ್ಲ, ಕಲಹ ಮಾಡುತ್ತಾರೆ. ಇದರಿಂದ ಇವರಿಗೆ ಬ್ರಾಹ್ಮಣ್ಯ ನಾಶವಾಗುತ್ತೆ. ''ಬಹಿಷ್ಕುರುತ ತಂ ವಿಪ್ರಂ ಅಸಹಿಷ್ಣುಂ ಮಮೋಚ್ಚ್ರಯಂ'' (ನನ್ನ ಜೀವೋತ್ತಮತ್ವವನ್ನು ಒಪ್ಪದಿರುವ ಈ ವಿಪ್ರನಿಗೆ ಬಹಿಷ್ಕಾರ ಮಾಡಿ), ಗುರುದ್ರೋಹದಿಂದ ಬ್ರಾಹ್ಮಣ್ಯಹಾನಿಯಾಗುತ್ತೆಂದು ಅರ್ಥ. ಶೇಷನಿಗೆ ಇಂತಹವರ ಸಂಗ ಬೆರೆಯಬಾರದೆಂದು ಅವರ ಸ್ವರೂಪ ಹೇಳುತ್ತಾರೆ. ಕಮಲನಾಭ ಕಲಿ. ತಮ್ಮಣ ಮಯ. ಕಲಿಯ ಆವೇಶಯುಕ್ತ ಶ್ರೀನಿವಾಸನು ಮಣಿಮಂತ. ತಮಸ್ಸಿಗೆ ಸಾಧನೆ ಮಾಡಿಕೊಳ್ಳುತ್ತಾರೆ. ಗುರುದ್ವೇಷ ಬಹುಕಷ್ಟಪಡಿಸುತ್ತೆ. ನಂತರ ಹಯಗ್ರೀವ ಮುನಿಯ ಜ್ಞಾನವನ್ನು ಕೊಂಡಾಡಿ ಭಕ್ತರ ಸ್ವರೂಪ ಹೇಳುತ್ತಾರೆ. ''ವಾದಿರಾಜಭಟ್ಟ, ವಿಪ್ರ, ಶ್ರೀಪತಿ, ವ್ಯಾಸರಾಜ, ಗೋಪಣ್ಣ ವಾಸುದೇವಮುನಿ, ಉಪೇಂದ್ರಭಟ್ಟ ಸೂರಣ ಭಟ್ಟ, ಕನಕಾಕೃಷ್ಣಭಟ್ಟ ಹಿರಣ್ಯಭಟ್ಟ ಮಣಿಬಾಲವೇಂಕಟಾದ್ರಿ ಇವರೇ ಮೊದಲಾದವರು ವಾದಿರಾಜಭಕ್ತರು. ಪ್ರಾಣೋಪಾಸಕರು. ಕಮಲನಾಭ, ದಾಂಬಲ ನಾರಾಯಣ, ಚಿಂತಾಮಣಿಪುತ್ರ ಲಕ್ಷ್ಮೀನಾರಾಯಣ, ತಮ್ಮಣ, ಶ್ರೀನಿವಾಸ ಈ ಐವರೂ ಅವಿಶ್ವಾಸಿಗಳು. ದಾಂಬಲ ಹರಿ ಚಂಚಲಚಿತ್ತ, ವಿಪರೀತಜ್ಞಾನಿಯೇ. ಅಪ್ಪಣ ಕೃಷ್ಣಭಟ್ಟ ಬದಲಾಯಿಸಿಹೋಗಿ ಈಗ ನನ್ನ ಭಕ್ತ. ವಿಠಲಾದಿಗಳು ನಮ್ಮ ಮಠದವರೇ. ಕೃಷ್ಣಾಚಾರ್ಯಪುತ್ರ ಶ್ರೀನಿವಾಸನೂ ಭಯಂಕರತ್ವವನ್ನು ಬಿಟ್ಟು ಸೌಮ್ಯತೆ ಹೊಂದಿದ್ದಾನೆ. ನಮ್ಮ ಮಠದ ಸ್ವಾಮಿಗಳೂ ಭಕ್ತರೇ. ವಿಪ್ರನ ಅಳಿಯ ರಾಮಚಂದ್ರನೂ ಭಕ್ತ. ಹೀಗೆ ಮೂರುವಿಧ ಜನರಿದ್ದಾರೆ. ವಿಪ್ರನೇ ಇನ್ನೇನು ಕೇಳಬೇಕು? ದುರ್ಜನರು ಯಮನದೆಸೆಯಿಂದ ದಂಡಿಸಲ್ಪಡುತ್ತಾರೆ. ಅಷ್ಟು ತಿಳಿ'' ಎಂದಿದ್ದಾರೆ. ಮುಂದೆ ಬಹು ಭಕ್ತರಿಗೆ ಹೇಳುತ್ತಾ ''ಗ್ರಂಥದಲ್ಲಿ ಅವಿಶ್ವಾಸ ಮಾಡಬೇಡಿ. ಶ್ರದ್ಧಾಭಕ್ತಿಯುಳ್ಳವರಿಗೆ ಒಳ್ಳೇ ಲೋಕಕೊಡಿಸುತ್ತೇನೆ. ವಾಸುದೇವ ಮುನಿಯ ಪೂಜೆಯಿಂದ ಸನ್ನಿಧಾನ ಹೆಚ್ಚಿಸು-ತ್ತೇನೆ.'' ಎಂದು ಹೇಳಿ, ''ಎಲೈ ವೇದನಿಧಿಯೇ ! ಇತಿ ಶ್ರೀ ಬರೆದು ಅಧ್ಯಾಯ ಮುಗಿಸಬೇಡ. ಮತ್ತುಸ್ತಸ್ಯ ಭಾಗೋಯಂ ಸಮಾಪ್ತಿಃ ಶ್ರೀರಮಾತ್ಮಿಕಾ'' ಎಂದಿದ್ದಾರೆ. (ಅರ್ಥ ಕೊನೆಯ ಎರಡು ಅಧ್ಯಾಯಗಳು ವೇದವೇದ್ಯರ ಮಹಿಮೆ, ಲಕ್ಷ್ಮ್ಯಾತ್ಮಕ

ಮಂಗಳಕ್ಕೆ ಮೀಸಲಾಗಿದೆ.) ''ವಿಪ್ರನೇ! ನೀನು ವೇದವೇದ್ಯರ ಪಾದೋದಕ ಕುಡಿ. ಅದು ಜ್ವರನಾಶಕ. ಲಕ್ಷ್ಮೀಪತಿ ಮನೆಯಲ್ಲಿ ಒಂದು ಸಮಾರಾಧನೆಗೆ ಅನೇಕ ಜನರು ಬಂದಿದ್ದಾಗ ಒಬ್ಬ ಯಾಜಕನಿಗೆ ವೇದವೇದ್ಯರ ಪಾದೋದಕವು ಜ್ವರಕ್ಕೆ ಔಷಧಿ ಎಂದು ಸ್ವಪ್ನವಾಯಿತು. ಎಲ್ಲರೂ ನಂಬಿದರು''. ''ಹೇ ವೇದನಿಧಿ! ನೀನು ಆಖ್ಯಾನದಲ್ಲಿ ವಿಶ್ವಾಸ ಕಮ್ಮಿ ಮಾಡಿಕೋಬೇಡ. ಅದರಲ್ಲಿನ ಅನ್ನಮಂತ್ರ (ಮಮ ಭೋಜನ ... ಫಲಶ್ರುತಿ ಎಂಬ 52-54ಶ್ಲೋಕಗಳು) ಭಜಿಸು'' ಎಂದಿದ್ದಾರೆ. ಆಖ್ಯಾನ ದೇವತಾಧಿ-ಕಾರಿಗಳಿಂದಲೂ ಸೇವ್ಯವೆಂದಾಯಿತು. ನಂತರ ಇಹ ಎಂದರೆ ಪ್ರಿಯ ಎಂದು ಬರೆಯಿಸಬೇಡ ಎಂದು ವಿಪ್ರನಿಗೆ ತಿಳಿಸಿ, ಪುನಃ ವೇದನಿಧಿಗಳಿಗೇ ''ನಿನ್ನ ಅನ್ನಮಂತ್ರ ಜಪದಿಂದ ಪರ್ಯಾಯಕಾಲದಲ್ಲಿ ಅನ್ನ ಉಕ್ಕುತ್ತೆ. ಎಷ್ಟು ಬಡಿಸಿದರೂ ಇನ್ನೂ ಇದೆ ಎಂಬಂತೆ ಸಿದ್ಧಿ ಬರುತ್ತೆ. ಗೌತಮರು ಕ್ಷಾಮಕಾಲದಲ್ಲಿ ಅನ್ನದಾನ ಮಾಡಿದಂತೆ ನೀನೂ ಮಾಡು. ಜನ್ಮಾಂತರದಲ್ಲಿ ನೀನು ಅನ್ನದಾನ ಕಮ್ಮಿ ಮಾಡಿದ್ದಿ. ಆ ದೋಷ ಹೋಗುತ್ತೆ. ನನ್ನ ಸೌಖ್ಯ ನೀನು ಮಾಡುವ ಗ್ರಂಥಪ್ರಚಾರದಿಂದ ಪೂರ್ಣವಾಗುತ್ತೆ. ನನ್ನ ಸದ್ಭಕ್ತಿ ಸಂಭೂತಿ ತಿಳಿದು ನನ್ನನ್ನು ಭಜಿಸು'' ಎಂದು ಉಪದೇಶಿಸಿದ್ದಾರೆ. ನಂತರ ಬಹುಭಕ್ತರಿಗೆ ವೇದವೇದ್ಯಮುನಿಗಳ ಮಹಿಮೆ ತಿಳಿಸುತ್ತಾರೆ. ''ಸಜ್ಜನರೇ ನನ್ನ ಶಿಷ್ಯ ವೇದವೇದ್ಯ ಆದರ್ಶ ಯತಿ, ನನ್ನ ತಪಃಫಲ ಅಂತಹ ಶಿಷ್ಯ ದೊರೆತದ್ದು. ಸ್ನಾನ, ಧ್ಯಾನ, ಅರ್ಚನೆ, ಭೋಜನ, ವಾದ, ಪ್ರವಚನಾದಿ ಸರ್ವವನ್ನೂ ವೇದಶಾಸ್ತ್ರರೀತಿಯಿಂದ ಮಾಡಿ ದೇವರಿಗೆ ಅರ್ಪಿಸುತ್ತಾನೆ. ವೃಥಾ ಒಂದು ಕ್ಷಣ ಕಳೆಯುವುದಿಲ್ಲ. ನಿತ್ಯವೂ ಶೋಕ, ಕೋಪಹೀನನಾಗಿ ಲೋಕೋಪಕಾರ ಶೀಲನಾಗಿದ್ದಾನೆ. ನನಗೆ ಆನಂದಪ್ರದನಾಗಿ ನನಗೆ ಸಮನಾಗಿಯೇ ನಡೆಯುತ್ತಾನೆ'' ಎಂದಿದ್ದಾರೆ. ''ವಾದಿರಾಜಭಟ್ಟ ! ವೃಂದಾವನಾ-ಚಾರ್ಯರಿಗೆ ಮನೆ ದಾನ ಮಾಡಿಬಿಟ್ಟಿದ್ದಿ. ಪಾರ್ಥನಂತೆ ನಿನ್ನ ಜನ್ಮ ಸಾರ್ಥಕವಾಯಿತು. ವಿಪ್ರನಿಗಾಗಿ ಲಕ್ಷ್ಮೀಪತಿಯ ಕೈಯಲ್ಲಿ ಪತ್ರತಾಪ ರುದ್ರನು ದ್ರವ್ಯವನ್ನು ಕೊಟ್ಟು ಆ ಸೇವೆಯಿಂದಲೇ ತನ್ನ ಪ್ರಾರಬ್ಧವನ್ನು ಶುಷ್ಕವನ್ನಾಗಿ ಮಾಡಿ ಬದುಕಿಹೋದ. ನೀನೂ ಹಾಗೆ ಆದಿ. ಧನ್ವಂತರಿ ಮತ್ತು ಕೃಷ್ಣರನ್ನು ಭಜಿಸು. ಭಟ್ಟನೇ ! ಪಾರ್ಥನಂತೆಯೇ ದೇವರಲ್ಲೂ ಶರಣು ಹೊಂದು. ವೇದವೇದ್ಯರನ್ನೂ ಭಜಿಸು. ವೇದವೇದ್ಯರೆಂದರೆ ಸರ್ವಜ್ಞಯತಿ, ವಾದಜಯಿಷ್ಣು, ಪ್ರಾತಃಸ್ಮರಣೀಯದಿವ್ಯಮೂರ್ತಿ. ಇಂದ್ರನು ವಜ್ರಾ-ಯುಧದಿಂದ ಶತ್ರುವನ್ನು ಕೊಂದಂತೆ, ನಾನು ವೇದವೇದ್ಯರ ಅಂತಃ ಇದ್ದು ಅವರ ಶತ್ರುಗಳನ್ನು ನಿಗ್ರಹಿಸುತ್ತೇನೆ. ಆ ಶತ್ರುಗಳ ನಾಲಿಗೆಯನ್ನೇ ಒಣಗಿಸಿಬಿಡುತ್ತೇನೆ. ಹೇ ವೇದವೇದ್ಯ! ನೀನು ನನ್ನ ಮತ್ತು ಆನಂದತೀರ್ಥರ ಗ್ರಂಥಗಳೆಂಬ ಅಸ್ತ್ರಗಳಿಂದ

ಸಹಿತನಾಗಿ ದೇಹರಥದಲ್ಲಿ ಸ್ಥಿತನಾಗಿ ಶತ್ರುಗಳನ್ನು ಗೆಲ್ಲು. ಅದ್ವೈತಪಕ್ಷವನ್ನು ಸುಡು. ಇನ್ನು ''ತಿಮಿರಂ ಸಮರೇ ರಮ್ಯಂ'' ಎಂಬ ಒಗಟು ಶ್ಲೋಕದ ಅರ್ಥ ನಿನಗೆ ಗೊತ್ತು. ಹಾಗೆಯೇ ಅದ್ವೈತಿಗಳು ನಿನ್ನನ್ನು ನೋಡಲಿಕ್ಕೇ ಭಯವಾಗುವಂತೆ ನಿನ್ನ ಪ್ರತಿಭೆಯನ್ನು ಹೆಚ್ಚಿಸಿ ಕಾಪಾಡುತ್ತೇನೆ. ನಿನ್ನ ಜ್ಞಾನಸಾಗರದಿಂದ ಸಂಸಾರಿಗಳ ಬುದ್ಧಿಕೂಪಗಳನ್ನು ತುಂಬಿ ಕಾಪಾಡು. ನಿನಗೆ ದಾಸ್ಯತ್ವವಿದೆ. ಸಾಮ್ಯವನ್ನೇ ಕೊಟ್ಟಿದ್ದೇನೆ. ಇನ್ನು ಲೋಕದಲ್ಲಿ ನಿನ್ನ ಸಮರು ಎಲ್ಲಿದ್ದ ಬರುತ್ತಾರೆ ? ಋಜುವಿಗೆ ಋಜುವೇ ಸಮ ಎಂದು ಭಾವ. ನಿನ್ನ ವಿರೋಧಿಗಳು ಗೀತೋಕ್ತ ಅಸುರರೇ ಸರಿ. ಅವರು ಅಸೂಯಾಪರರು. ತಮಸ್ಸಿಗೆ ಹೋಗುತ್ತಾರೆ. ಹೀಗೆ ಅಧ್ಯಾಯ ಮುಗಿದಿದೆ.

ಶ್ರೀವಾದಿರಾಜಗುರ್ವಂತರ್ಗತ ಮಧ್ವೇಶಾರ್ಪಣಮಸ್ತು

## ಇಪ್ಪತ್ತೆರಡನೆಯ ಅಧ್ಯಾಯ ಸಾರಾಂಶ:

ಇಪ್ಪತ್ತೆರಡನೆಯ ಅಧ್ಯಾಯದಲ್ಲಿ ಲಕ್ಷ್ಮ್ಯಾತ್ಮಕ ಮಾಂಗಳಿಕ ಉಪಸಂಹಾರವಿದೆ. 89 ಶ್ಲೋಕಗಳು, 13 ಪ್ರಕರಣಗಳು. ಆರಂಭದಲ್ಲಿ ಶ್ರೀಪತಿಗೆ ಎಷ್ಟು ಗೃಹಕೃತ್ಯವಿದ್ದರೂ ಬಿಡದೆ ವೇದವೇದ್ಯರ ಮುಂದೆ ಆಖ್ಯಾನದ ಅಂತ್ಯಭಾಗವನ್ನಾದರೂ ಪಾರಾಯಣ ಮಾಡೆಂದು ಹಿತೋಕ್ತಿ ಹೇಳಿದ್ದಾರೆ. ಶೇಷಾದ್ರಿಗೂ ಒಂದೇ ಶ್ಲೋಕದಲ್ಲಿ ಪೂರ್ವಾರ್ಜಿತ ಕರ್ಮಶೇಷವನ್ನು ವೃಂದವನಾಶ್ವತ್ಥಸೇವೆಗಳಿಂದ ಕಳೆದುಕೋ ಎಂದಿದ್ದಾರೆ. ನಂತರ ವಾಸುದೇವ ಮುನಿಯ ಪ್ರಶಂಸೆ ಇದೆ. ಆ ಮುನಿ ಮಾಧವಾನ್ನದಿಂದ ತನ್ನ ಪ್ರಾರಬ್ಧ ಕಳೆದುಕೊಂಡಿದ್ದಾನೆ. ದ್ರೌಪದೀ ಹಸ್ತದ ಅನ್ನದಂತೆ ಆ ಭಿಕ್ಷಾನ್ನವೂ ಸ್ವವರ್ಣಾಶ್ರಮ ಧರ್ಮ ಪ್ರಾಪ್ತವಾದ್ದರಿಂದ ಪರಮಪಾವನವೇ ಎಂದಿದ್ದಾರೆ. ''ಮುನಿಯೇ ! ನಿನ್ನ ಪಾಪ ಹೋಯಿತು. ಹೃದ್ಗತದೇವ ಪೂಜಾಧಿಕಾರಬಂದಿತು. ಸಂಸಾರ ತಾಪ ನಿನಗೆ ಇಲ್ಲೂ ಇಲ್ಲ. ದೇವಲೋಕಗಳಲ್ಲಿಯೂ ಇಲ್ಲ. ನನ್ನ ಮಾತು ಸುಳ್ಳಲ್ಲ'' ಎಂದಿದ್ದಾರೆ. ಅನಂತರ ವೇದವೇದ್ಯರ ಪ್ರಕರಣ. ''ಅಮುಚನ್ನಮುಚಃ'' ಎಂಬ ಒಗಟು ಶ್ಲೋಕಕ್ಕೆ ವೇದವೇದ್ಯರೇ ಅರ್ಥ ಬಲ್ಲರು. ಸಾಕ್ಷಾತ್ತಾಗಿಯೂ ಅರ್ಥವನ್ನು ನೋಡಿ ವಾಕ್ಯಾರ್ಥ ವಿವರಿಸಬಲ್ಲರು. ಉಪಕ್ರಮಾದಿಗಳಿಂದಲೂ ಆ ವಾಕ್ಯಾರ್ಥವನ್ನು ಸಾಧಿಸಬಲ್ಲರು. ''ಹೇ ವೇದವೇದ್ಯ! ಉಭಯರೀತಿಯಿಂದ ನಿರ್ಣಾಯಕತ್ವ(ಮಧ್ವಾಚಾರ್ಯರರಿಗಿರುವಂತೆ) ನಿಮಗೇ ಸರಿ. ನಿಮ್ಮ ಕಥೆ ಪರಮಮಂಗಳ, ನಿರ್ದೋಷ, ನನ್ನ ಪೂರ್ಣಸಾದೃಶ್ಯ ನಿಮಗೆ ಬಂದಿದೆ. ನಿಮಗೆ ಸರ್ವಮಂಗಳವಾಗಲಿ'' ಎಂದು ಹರಸಿದ್ದಾರೆ. ಮುಂದೆ ಶ್ರೀಪತಿಗೆ ಅಥವಾ ಶೇಷನಿಗೆ ಹೇಳುತ್ತಾರೆ. ''ಶ್ರೀಪತೇ ! (ಅಥವಾ ಶೇಷ) ವಿಪ್ರನಿಗೆ ಅನ್ನದಾನ ಮಾಡು. ಇಲ್ಲದಿದ್ದರೆ ನಾನು ಯಾರನ್ನಾದರೂ ಬಡವರನ್ನು ಪ್ರೇರಿಸಿ ಅವನಿಗೆ

ಕೊಡುತ್ತೇನೆ. ನೀನು ವಿಧೇಯನಾಗಿದ್ದಿ. ರುದ್ರದೇವರು ನಿನ್ನ ಮನಸನ್ನು ಸರಿಯಾಗಿಯೇ ಪ್ರೇರಿಸಿದ್ದಾರೆ. ನೀನೇ ರಕ್ಷಿಸು'' ಎನ್ನುತ್ತಾರೆ. ''ವಿಪ್ರನೇ ! ನಿನ್ನ ಜ್ಞಾನದಿಂದ ಮೂರು ಕುಲ ಪವಿತ್ರವಾಯಿತು. ಇದು ನನ್ನ ಅನುಗ್ರಹದ ಫಲ. ನನ್ನನ್ನು ನೀನು ಸೇವಿಸಿ ಕಾಪಾಡ-ಬೇಕೆಂದು ಬೇಡಿಕೊಂಡೆ, ಕಾಪಾಡಿದ್ದಾಯಿತು. ನೀನು ಇನ್ನು ಭಿಕ್ಷೆಗೆ ಹೋಗಬೇಡ. ಮಠದ ಅನ್ನದಿಂದಲೇ ಭೋಜನ ಯಜ್ಞವಾಗಲಿ'' ''ಹಯಗ್ರೀವಯತಿಯೇ ! ನಿನ್ನ ಖಂಡನೆ ಮಾತುಗಳನ್ನು ಕೇಳಿ ಅದ್ವೈತಿಗಳು ನಡುಗುತ್ತಾರೆ. ವೇದವೇದ್ಯ ಸೂರ್ಯನಿಂದ ಆ ದುರ್ಮತವೆಂಬ ತಮಸ್ಸು ನಾಶವನ್ನೇ ಹೊಂದುತ್ತೆ.'' ''ವೇದವೇದ್ಯರೇ ! ನಿನಗೆ ಯಾರಾದರೂ ಒಂದು ಕೆಟ್ಟುಮಾತನಾಡಿದರೆ ನಾನು ಸಹಿಸುವುದೇ ಇಲ್ಲ. ನಿನ್ನ ಅಪರಾಧಿಗಳು ಯಮನಿಂದ ನರಕ್ಕೇ ಒಯ್ಯಲ್ಪಡುತ್ತಾರೆ''. ''ವಾದಿರಾಜಭಟ್ಟನೇ ! ನನ್ನ ಆಖ್ಯಾನವು ಎಲ್ಲಾ ದುರ್ಮತಗಳನ್ನೂ ಧ್ವಂಸಮಾಡಿದೆ. ನೀನೂ ಪರಮಾದರದಿಂದ ಪಠಿಸು. ಪರಮಪುರುಷ ಹರಿ ಪ್ರಸನ್ನನಾಗುತ್ತಾನೆ.'' ''ಲಕ್ಷ್ಮೀಪತೇ! ಕಾರ್ಯತ್ರಯ ಉಳಿದೇ ಹೋಯಿತು. ನೀನು ಈಗ ಕೃತಿಯನ್ನು ಪೂರ್ಣಮಾಡಿ ಕೃತಕೃತ್ಯನಾಗು. ನಿನ್ನ ಸೇವೆ ಪುತ್ರಸೇವೆ ಎನ್ನಿಸುತ್ತೆ, ನಿನಗೆ ಪುಣ್ಯ ಬರುತ್ತದೆ. ನನ್ನ ಸೇವೆ ಮಾಡಿ ನೂರುವರ್ಷ ಬದುಕು. ನಾನು ವೃಂದಾವನದಲ್ಲಿ ನಿಮ್ಮಗಳ ಕ್ಷೇಮಕ್ಕಾಗಿ ಇರುತ್ತೇನೆ. ಕರದಾನಕ್ಕಿಂತ ಕೃತ್ಯತ್ರಯ ಹೆಚ್ಚಿನ ಸೇವೆ. ಇದು ನನ್ನ ಕೃತಿಯೇ ಎಂದು ನಿನಗೆ ನಿಶ್ಚಯವಿದ್ದರೆ ಕಾರ್ಯತ್ರಯಮಾಡು. ಹಾಗೆ ಮಾಡಿದರೆ ಇಂದ್ರನಿಗೆ ಜಯಂತನಂತೆ ನೀನು ನನ್ನ ಪುತ್ರ. ನೀನು ಮಾಡದಿದ್ದರೂ ಪೂರ್ಣಕಾಮ-ನಾದ ನನಗೇನೂ ಇಲ್ಲ, ನಿನಗೆ ಹೆಚ್ಚು ಲಾಭ. ಆಖ್ಯಾನದ ಅರ್ಥಪ್ರವಚನಮಾಡಿ ಇಲ್ಲಿಗೆ ಮುಗಿಸಿ ಕೃಷ್ಣಾರ್ಪಣ ಮಾಡೋದು. ಕಲ್ಲಿನಲ್ಲಿ ಕೆತ್ತಿಸೋದು. ಅನ್ನಮಂತ್ರ ಪಠಿಸಿ ಅನ್ನದಾನ ಮಾಡುವುದು. ಹೀಗೆ ಮೂರು ಕಾರ್ಯ. ಇದು ನಿನ್ನ ಹಿತಕ್ಕೆ ಹೇಳಿದ್ದು'' ಎಂದಿದೆ. ''ಹಯಗ್ರೀವಮುನೇ ! ಬೇಕಾದಷ್ಟು ದುಡ್ಡಿದೆ. ದಾನ ಮಾಡುತ್ತಿ, ವಿದ್ಯಾವಂತ. ಆದರೆ ಬ್ರಾಹ್ಮಣನ ಸಂಗಡ ಸೇರಿಕೊಂಡು ಅಧ್ಯಯನ ತಿಥಿಗಳಲ್ಲಿ ಆಖ್ಯಾನಾರ್ಥ ವಿಚಾರಮಾಡಿ ಕೃಷ್ಣಾರ್ಪಣಮಾಡಿದರೆ ವೈದಿಕದಾನ, ಜ್ಞಾನಯಜ್ಞ ಎನ್ನಿಸುವುದು. ಅನೇಕರಿಗೆ ದುಡ್ಡು ಹೆಚ್ಚಿನ ಪದಾರ್ಥ, ಲೌಕಿಕ ಪರಿತ್ಯಾಗ ಮಾಡು(44). ಈ ಜಗತ್ತು ಮಾಯಾಕಲ್ಪಿತ, ಮಿಥ್ಯಾ ಎಂದು ಅದ್ವೈತಿಗಳು ಹೇಳುತ್ತಾರೆ. ನಾವು 'ಜಗತ್ತು' ಎಲ್ಲಾ ಹರೀಚ್ಛೆಯ ಅಧೀನ. ಅಸ್ವತಂತ್ರ, ಸ್ವತಂತ್ರವಾದುದು ಯಾವುದೂ ಇಲ್ಲ ಎನ್ನುತ್ತೇವೆ. ಅಂಥ ತುಚ್ಛ ಲೌಕಿಕವನ್ನು ಏನು ವಿಚಾರಮಾಡುವುದು ? ಎಂದು ನೀನು ನಿಶ್ಚಯಿಸು. ಆದ್ದರಿಂದ ಪೃಚ್ಛ ಸಚ್ಛಾಸ್ತ್ರತತ್ವಾನಿ, ಮಯೋಕ್ತಾನಿ ನ ವೈ ಮೃಷಾ''(ಶಾಸ್ತ್ರದ ತತ್ವಗಳನ್ನು

ವಿಚಾರಮಾಡಿದರೆ ಪುಣ್ಯಬರುತ್ತೆ. ವಿಪ್ರನಿಗೆ ಜ್ವರಬಂದಿದೆಯಲ್ಲಾ ಎಂಬ ಪೂರ್ವಪಕ್ಷ ಅಸೂಯೆ ಮೂಲಕ. ನನಗೆ ಇನ್ನೂ ದೇವರು ಕಾಣಿಸಿಲ್ಲವಲ್ಲಾ ಎಂದು ಅವನಿಗೆ ಜ್ವರ. ಸ್ವಪ್ನದಲ್ಲಿ ನನ್ನ ಕಥಾಶ್ರವಣದಿಂದ ಅಲ್ಲ. ಅದು ತಾನಾಗಿಯೇ ವಾಸಿ ಆಗುತ್ತೆ. ನೀನು ಪರಬ್ರಹ್ಮನ ಮಹಿಮೆ ಕೇಳು. ನನ್ನ ಸ್ವರೂಪ ದೇವತೆಗಳಿಗೆ ಗೊತ್ತು. ಮನುಷ್ಯರಿಗೆ ಈಗ ಗೊತ್ತಿಲ್ಲ. ಪುಷ್ಯನಕ್ಷತ್ರದಲ್ಲಿ ಹುಟ್ಟಿದ ಯಾವನೋ ಒಬ್ಬ ಬಲ್ಲ. (ರಘುಪ್ರವೀರತೀರ್ಥರು ಪುಷ್ಯ ನಕ್ಷತ್ರಸಂಜಾತರು) ಎಂದಿದ್ದಾರೆ. ಇಷ್ಟು ಹೇಳಿ ತತ್ತ್ವೋಪದೇಶ 11 ಶ್ಲೋಕಗಳಲ್ಲಿ (55-65) ಮಾಡಿದ್ದಾರೆ. ಕಂಠಪಾಠಯೋಗ್ಯ. ಸಾರಾರ್ಥ ಹರಿಯೇ ಸರ್ವೋತ್ತಮ. ಕರ್ತಾ. ಸೇವಾನುಸಾರಿ ಫಲದಾತಾ. ಬ್ರಹ್ಮನನ್ನು ಸೃಷ್ಟಿಕಾರಕನನ್ನಾಗಿ ಮಾಡಿದ್ದಾನೆ. ಗರುಡವಾಹನ, ಶೇಷಶಯ್ಯಾ ಆಗಿದ್ದಾನೆ. ದೇವತೆಗಳೆಲ್ಲರೂ ಅವನ ಸೇವೆಗೆ ತವಕದಿಂದ ಓಡಿ ಬರುತ್ತಾರೆ. ಅವನ ಸೇವೆ ಮಾಡಿ ಪದವೀ ಹೊಂದಿದ್ದಾರೆ. ಪ್ರಭು ನನಗೂ ಒಂದು ಅಧಿಕಾರ ಕೊಡುತ್ತಾನೆ'' ಎಂದು ಹೆಮ್ಮೆಯಿಂದ ಹೇಳಿಕೊಂಡಿದ್ದಾರೆ. ಮುನಿಯೇ ! ಅದ್ವೈತಮತದಲ್ಲಿ ಬ್ರಹ್ಮನಿರ್ಧರ್ಮಕ, ಜ್ಞಾನಸ್ವರೂಪ ಆದರೂ ಜ್ಞಾನವುಳ್ಳವನಲ್ಲ. ದ್ವೈತಮತದಲ್ಲಿ ಅನಂತಜ್ಞಾನ, ಸುಖಗಳ ಭೋಗವುಳ್ಳವನು. ಕಲ್ಯಾಣಗುಣಪೂರ್ಣ, ಅದ್ವೈತದ ಕೇವಲ ಜ್ಞಾನಸ್ವರೂಪತ್ವಪುರುಷಾರ್ಥವಲ್ಲ. ಎಂದು ನಿರೂಪಿಸಿದ್ದಾರೆ. ಮತ್ತೂ ಲಕ್ಷ್ಮೀಪತಿಗೆ ಹೇಳುತ್ತಾ ''ಮಣಿಬಾಲರಾಮನು ದಾಂಬಲನನ್ನು ಭಯಪಡಿಸಿ ಓಡಿಸಿ ನನ್ನ ಸೇವಾ ಮಾಡಿದ್ದಾನೆ. ವಾದಿರಾಜ ಭಟ್ಟಾದಿಗಳು ಕೃತಿ ಪಾರಾಯಣಮಾಡಿ ಅರ್ಚಿರಾದಿ ಮಾರ್ಗಪ್ರಾಪ್ತಿಗೆ ಅರ್ಹರಾಗಿದ್ದಾರೆ. ಭಟ್ಟನು ವಿಪ್ರನಿಗೆ ಮನೆಯನ್ನೇ ಕೊಟ್ಟಿದ್ದಾನೆ''. ಎಂದು ಪ್ರಶಂಸಿಸಿದ್ದಾರೆ. ಇನ್ನು ಮುಂದಿನ ವಿಷಯ ಹೇಳುತ್ತಾರೆ. ಅಧ್ಯಾಯ (ಅಧ್ಯಾತ್ಮ)ಪರ್ಯಂತ ಎಂದರೆ ಭಕ್ತ ಅಧಿಕಾರಿಗಳು ಈ ಗ್ರಂಥಪಾರಾಯಣ ಮಾಡಿ ಫಲಹೊಂದಿ ಸಿದ್ಧಿ ಪಡೆಯುವವರೆಗೂ, ವಿಪ್ರ ವೃಂದಾವನಾಚಾರ್ಯರಾಗಿ ವ್ಯಾಸಮುಷ್ಟಿತಂದು ಪೂಜಿಸಿ, ಅವರ ಸಂಬಂಧಿಗಳೆಲ್ಲಾ ಅಧಿಕಾರ ಹೊಂದಿ ಅವರ ಉಪದೇಶದಿಂದ ಸಿದ್ಧಿ ಹೊಂದುವವರೆಗೂ, ಇತರ ಭಕ್ತರೂ ದ್ವೇಷಿಗಳ ಸಂಗ ತ್ಯಜಿಸಿ ಸಾಧನೆ ಮಾಡಿ ಸಾಕ್ಷಾತ್ಕಾರ ಹೊಂದುವವರೆಗೂ, ನಾನು ತಪಿಸುತ್ತಾ ಧ್ಯಾನ ಮಾಡುತ್ತೇನೆ. ನನ್ನ ಸಂಕಲ್ಪಗಳೆಲ್ಲಾ ಈಡೇರುವುದನ್ನು ನೋಡುತ್ತೇನೆ ಎಂದಿದೆ.

ಶ್ರೀವಾದಿರಾಜಗುರ್ವಂತರ್ಗತಶ್ರೀಮಧ್ವಾಂತರ್ಗತಅಶ್ವಿನೀಹಯಗ್ರೀವಾತ್ಮಕ-ಕೃಷ್ಣಾರ್ಪಣಮಸ್ತು

## ಫಲಿತಾರ್ಥ

**ಹೀಗೆ 22ಅಧ್ಯಾಯಗಳಲ್ಲಿ ಮಧ್ವಮತದ ಉತ್ಕರ್ಷವೂ, ಪುರಾಣೋಕ್ತ**

ವಾದಿರಾಜ ಋಜುತ್ವವೂ, ವಿಪ್ರನ ಇಂದ್ರತ್ವ, ಧವಳಸರೋವರದ ಗಂಗಾತ್ವ, ವಿಪ್ರಸಹಾಯಕರ ದಿಕ್ಪಾಲಕತ್ವ, ವೇದವೇದ್ಯರ ಋಜುತ್ವ, ವೇದನಿಧಿಗಳ ವೈನತೇಯತ್ವಾದಿ ಅದ್ಭುತಪ್ರಮೇಯಗಳು ಪ್ರತಿಪಾದಿತವಾಗಿವೆ. ಎಲ್ಲಾ ಸಚ್ಛಾಸ್ತ್ರಾನುಸಾರಿ ಎಂದರೆ ಮೂಲಶಾಸ್ತ್ರಾವಿರುದ್ಧ ಮಹಿಮೆಗಳು ವರ್ಣಿತವಾಗಿವೆ. ಭವಿಷ್ಯ ವಿವಾದಗಳೂ ಉಕ್ತವಾದಂತೆ ಹುಟ್ಟಿಕೊಂಡಿವೆ. ವಾಗುಚ ಗ್ರಂಥವೂ, ಎರಡು ವಿಶ್ವಪ್ರಿಯ ವಿಲಾಸಗಳೂ ಸಮಾಖ್ಯಾ ಎಂಬಂತೆ ಇವೆ. ಪಾದ್ಮಾದಿವಚನಗಳೂ ವಾದಿರಾಜಗುರುವರಚರಿತಾಮೃತದಲ್ಲಿ ಉದಾಹೃತವಾಗಿವೆ. ''ಅಯಂ ಋಜುಃ, ವಿಷ್ಣುವಿಶಿಷ್ಟಪ್ರತಿಮಾತ್ವಾತ್, ಭಾವಿರುದ್ರಗರುಡಾದಿ ಸೇವಿತತ್ವೇ ಸತಿ ರಮಾಽವರ ಪುರುಷತ್ವಾತ್'' ಎಂದು ಉಪಪತ್ತಿಯೂ ಇದೆ. ಉಪಕ್ರಮ ಉಪಸಂಹಾರಾದಿ ಇತರಲಿಂಗಗಳೂ ಸ್ಪಷ್ಟವಾಗಿವೆ. ಅಬಾಧಿತ ಸಾತ್ವಿಕತಮವಿಷಯ-ಪ್ರತಿಪಾದಕವೆಂದಮೇಲೆ ಆಖ್ಯಾನವು ಮಾನ್ಯ ವಾದ ಋಜೂಪದಿಷ್ಟ ಸ್ವತಃ ಪ್ರಮಾಣ ಶಾಸ್ತ್ರಗ್ರಂಥವೆಂದು ಹೇಳಲು ಅಡ್ಡಿ ಏನೂ ಇಲ್ಲ, ಆರಂಭದಿಂದ ಕೊನೆಯವರೆಗೂ ಹರಿಗುರುಭಕ್ತಿ ಎಂಬ ತಾರಕಭಾವವು ತುಂಬಿ ತುಳುಕಾಡುತ್ತೆ.

ಶ್ರೀವಾದಿರಾಜಗುರ್ವಂತರ್ಗತಮಧ್ವೇಶಾಭಿನ್ನಅಶ್ವಿನೀಹಯಗ್ರೀವಾತ್ಮಕ-ಕೃಷ್ಣಾರ್ಪಣಮಸ್ತು.

ಶ್ರೀಸುಬ್ಬರಾಯಶರ್ಮಣೇ ನಮಃ।
ಪೃಥ್ವೀಮಂಡಲಮಧ್ಯಸ್ಥಾಃ ಪೂರ್ಣಬೋಧಮತಾನುಗಾಃ।
ವೈಷ್ಣವಾಃ ವಿಷ್ಣುಹೃದಯಾಃ ತಾನ್ ನಮಸ್ಯೇ ಗುರೂನ್ಮಮ॥
((ಸುಭಾನು ಆಶ್ವೀನಶುಕ್ಲ ಸಪ್ತಮೀ ವೇದವ್ಯಾಸಪೂಜಾಂಗವಾಗಿ ))